# ಹಂಪಿ ಟೈಮ್ಸ್

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

70,000

HAMPI TIMES E-PAPER READERS



94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:02 Volume:02 • ಸಂಚಿಕೆ:02 Issue:02 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 22.06.2024 22.06.2024 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2


ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ.ವಿ.ಜಿ.

## ಹಂಪಿ ಟೈಮ್ಸ್ ಪತ್ರಿಕೆ ವಾರ್ಷಿಕೋತ್ಸವದ ಸಂಭ್ರಮದ ಕ್ಷಣಗಳು













# ರೈತರ ಬದುಕಿನೊಂದಿಗೆ ಚೆಲ್ಲಾಟವಾಡಿದ್ರೆ ಹುಷಾರ್ ಬಿತ್ತನೆ ಬೀಜ ಮೊಳಕೆಯೊಡೆಯದಿದ್ದರೆ ಮತ್ತೆ ಕೊಡಿ

## ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ತರಾಟೆ । ರೈತರಿಗೆ ಸೌಲಭ್ಯ ತಲುಪಿಸದಿದ್ರೆ ಸಹಿಸಲ್ಲ

## ಅಧಿಕಾರಿಗಳೇ ಬೋರ್‌ವೆಲ್ ರಿಪೇರಿ ಮಾಡಿಸಿದ್ರೂ ಮತ್ತೆ ಮತ್ತೆ ಏಕೆ ರಿಪೇರಿ? ಎಂದ ಸಿಎಂ

## ಜಿಲ್ಲೆಯಲ್ಲಿ ಎಸ್ಸೆಸ್ಸೆಲ್ಸಿ ಫಲಿತಾಂಶ ಕುಸಿತಕ್ಕೆ ಸಿಎಂ ಗರಂ । ಡಿಡಿಪಿಐ ಅಮಾನತ್ತಿಗೆ ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ರೈತರಿಗೆ ಬಿತ್ತನೆ ಬೀಜ ಗೊಬತಿಡ್ಡರ ಸಿಕ್ಕಿಲ್ಲ ಎಂದು ರೈತರು ಬೀದಿಗಿಳಿಯದ ಹಾಗೆ ಮುನ್ನೆಚ್ಚರಿಕೆ ಕ್ರಮವಾಗಿ ಬಿತ್ತನೆಗೆ ಸಮರ್ಪಕ ಬೀಜ ಮತ್ತು ರಸಗೊಬ್ಬರ ವ್ಯವಸ್ಥೆ ಮಾಡಬೇಕು ಎಂದು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು. ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲನಲ್ಲಿ ಜೂನ್ 21ರಂದು ವಿಜಯನಗರ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು. ಜಾನುವಾರುಗಳಿಗೆ ಮೇವು, ಜನರಿಗೆ ಕುಡಿಯುವ ನೀರು, ಕೆಲಸ ಕೇಳಿ ಬರುವವರಿಗೆ ಉದ್ಯೋಗ ಕೊಡುವುದರಲ್ಲಿ ಯಾವುದೇ ರೀತಿಯ ವ್ಯತ್ಯಾಸವಾಗದ ಹಾಗೆ ಕ್ರಮ ವಹಿಸಬೇಕು ಎಂದು ಸಿಎಂ ಅವರು ಅಧಿಕಾರಿಗಳಿಗೆ ತಾಕೀತು ಮಾಡಿದರು. ನೀವು ನಿಯಮಿತವಾಗಿ ಪ್ರವಾಸ ಮಾಡುತ್ತೀರಾ? ಹಳ್ಳಿಗಳಿಗೆ ಹೋಗುತ್ತೀರಾ? ಪ್ರತಿದಿನ ಡೈರಿ ನಿರ್ವಹಣೆ ಮಾಡುತ್ತೀರಾ? ಎಂದು ಜಂಟಿ ಕೃಷಿ ನಿರ್ದೇಶಕರ ಡೈರಿ ಕೇಳಿದ ಮುಖ್ಯಮಂತ್ರಿಗಳು, ಕೃಷಿ ಅಧಿಕಾರಿಗಳಿಗೆ ರೈತರ ಬಗ್ಗೆ ಕಾಳಜಿ ಇರಬೇಕು. ಎಲ್ಲರೂ ಪಟ್ಟಣ, ನಗರಕ್ಕಷ್ಟೇ ಸೀಮಿತವಾಗಬಾರದು. ಅಧಿಕಾರಿಗಳು ಹಳ್ಳಿಗಳಲ್ಲಿ ಸಹ ಇರಬೇಕು. ಹೋಬಳಿಯಲ್ಲಿ ಹಾಗು ತಾಲೂಕಿನಲ್ಲಿ ಇರುವವರು ಅಲ್ಲಿಯೇ ವಾಸ್ತವ್ಯ ಮಾಡಬೇಕು ಎಂದು ಸೂಚನೆ ನೀಡಿದರು. ಹಳ್ಳಿಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿಯ ಬಗ್ಗೆ ಮುಖ್ಯಮಂತ್ರಿಗಳು ಕೇಳಿದರು. ಮೇವು ಸರಬರಾಜು ಮತ್ತು ಕುಡಿಯುವ ನೀರು ಪೂರೈಕೆಗೆ ಯಾವುದೇ ಹಣಕಾಸಿನ ಕೊರತೆ ಇರುವುದಿಲ್ಲ. ಕುಡಿಯುವ ನೀರಿನ ಕೊರತೆ ಎದುರಾದ ಗ್ರಾಮಗಳಲ್ಲಿ ಜನತೆಗೆ ತೊಂದರೆಯಾಗದ ಹಾಗೆ ಖಾಸಗಿ ಬೋರವೆಲ್ ಮೂಲಕ ನೀರು ಪೂರೈಸಿ ಕ್ರಮ ವಹಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ತಿಳಿಸಿದರು. ಜಿಲ್ಲೆಯಲ್ಲಿ 683 ಶುದ್ಧ ಕುಡಿಯುವ ನೀರಿನ ಘಟಕಗಳ ಪೈಕಿ 631 ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು 52 ಯಾಕೆ ಕಾರ್ಯ ನಿರ್ವಹಿಸುತ್ತಿಲ್ಲ. ಇವು ಎಷ್ಟು ದಿನಗಳಿಂದ ಕಾರ್ಯನಿರ್ವಹಿಸದೇ ಹಾಗೆ ನಿಂತಿವೆ ಎಂದು ಮುಖ್ಯಮಂತ್ರಿಗಳು ಪ್ರಶ್ನಿಸಿದರು. ಜಿಲ್ಲೆಯಲ್ಲಿನ ಎಲ್ಲಾ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಯುದ್ಧೋಪಾದಿಯಲ್ಲಿ ಸರಿಪಡಿಸಲು ಕೂಡಲೇ ಅಗತ್ಯ ಕ್ರಮ ವಹಿಸಬೇಕು ಎಂದು ಮುಖ್ಯಮಂತ್ರಿಗಳು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಕೆಲವು ಹಳ್ಳಿಗಳಲ್ಲಿನ ಶುದ್ಧ ಕುಡಿಯುವ ನೀರಿನ ಘಟಕಗಳ ಸಾಮಾನುಗಳು, ಪಂಪಸೆಟ್ ಗಳು ಕಳ್ಳತನ ಪ್ರಕರಣಗಳು ಮರುಕಳಿಸಿ ಘಟಕ ದುರಸ್ತಿ ಮಾಡುವಲ್ಲಿ ವಿಳಂಬವಾಗುತ್ತಿದೆ ಎಂದು ಜಿಲ್ಲಾ ಪಂಚಾಯತ್ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಶುದ್ಧ ಕುಡಿಯುವ ನೀರಿನ ಘಟಕಗಳ ಸಾಮಾನುಗಳಿರಲಿ, ಇನ್ನೀತರ ಸರಕಾರದ ಸೊತ್ತಿನ ವಿದ್ಯುತ್ ತಂತಿ, ಪಂಪಸೇಟ್ ಮತ್ತು ಇನ್ನೀತರ ಬೆಲೆ ಬಾಳುವ ಯಾವುದೇ ವಸ್ತುಗಳ ಕಳ್ಳತನಕ್ಕೆ ಬ್ರೇಕ್ ಹಾಕಬೇಕು. ಹಳ್ಳಿಗಳಲ್ಲಿ ಅವ್ಯಾಹತವಾಗಿ ನಡೆಯುವ ಇಸ್ಪಿಟ್ ಮಟ್ಕಾ ದಂಧೆ ತಡೆಯಬೇಕು ಎಂದು ಪೊಲೀಸ್ ಇಲಾಖೆಗೆ ಮುಖ್ಯಮಂತ್ರಿಗಳು ಸೂಚಿಸಿದರು. ಜಿಲ್ಲೆಯಲ್ಲಿ ಎಲ್ಲ ಠಾಣೆಗಳ ಪಿಎಸ್ಐ ಅವರೊಂದಿಗೆ ನಿಯಮಿತವಾಗಿ ಸಭೆ ನಡೆಸಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಈ ಸಂಬಂಧ 26 ಪ್ರಕರಣಗಳನ್ನು ದಾಖಲಿಸಿ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಲಾಗುತ್ತದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿಬಾಬು ಅವರು ತಿಳಿಸಿದರು.

ರೈತ ಆತ್ಮಹತ್ಯೆ ಪ್ರಕರಣಗಳ ಪರಿಶೀಲನೆ: ಸಭೆಯಲ್ಲಿ ರೈತ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಚರ್ಚೆ ನಡೆಯಿತು. 2023-24ನೇ ಸಾಲಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಹೆಸರು ನೋಂದಾಯಿಸಿದ 35,838 ರೈತರ ಪೈಕಿ 29,510 ರೈತರಿಗೆ 8576 ಲಕ್ಷ ರೂ ಪರಿಹಾರ ನೀಡಲಾಗಿದೆ. 2024-25ನೇ ಸಾಲಿನಲ್ಲಿ ಜೂನ್ 15ರವರೆಗೆ 5174 ರೈತರು ಹೆಸರು ನೊಂದಾಯಿಸಿದ್ದಾರೆ ಎಂದು >> 3



### ನರೇಗಾ ಪ್ರಗತಿ

ನರೇಗಾ ಅನುಷ್ಠಾನದ ಬಗ್ಗೆ ಸಿಎಂ ಅವರು ಕೇಳಿದರು. 2024-25 ಸಾಲಿನ ವಾರ್ಷಿಕ ಮಾನವ ದಿನಗಳ ಗುರಿ ಆರು ತಾಲೂಕುಗಳು ಸೇರಿ 73 ಲಕ್ಷ ಮಾನವ ದಿನಗಳ ಗುರಿಯಿದ್ದು, ಈ ಪೈಕಿ ಜೂನ್ ತಿಂಗಳವರೆಗೆ 33.95 ಲಕ್ಷ ಸಾಧನೆಯಾಗಿದ್ದು, ಜೂನವರೆಗೆ ಶೇ.91.24ರಷ್ಟು ಸಾಧನೆಯಾಗಿದೆ ಎಂದು ಜಿಪಂ ಸಿಇಓ ಸದಾಶಿವ ಪ್ರಭು ಬಿ ಅವರು ತಿಳಿಸಿದರು.

### ಡಿಡಿಪಿಐಗೆ ತರಾಟೆ

ಎಸ್ಸೆಸ್ಸೆಲ್ಸಿಯಲ್ಲಿ 10ನೇ ಸ್ಥಾನದಲ್ಲಿದ್ದ ಜಿಲ್ಲೆಯು 27ನೇ ಸ್ಥಾನಕ್ಕೆ ಕುಸಿದಿದ್ದೇಕೆ? ಇದಕ್ಕೆ ಯಾರು ಜವಾಬ್ದಾರರು? ಇದಕ್ಕೆ ಹೊಣೆ ಯಾರು? ಡಿಡಿಪಿಐ ಮತ್ತು ಬಿಇಓ ಅವರ ಮೇಲೆ ಯಾಕೆ ಕ್ರಮ ಜರುಗಿಸಬಾರದು ಎಂದು ಮುಖ್ಯಮಂತ್ರಿಗಳು ಡಿಡಿಪಿಐ ಅವರಿಗೆ ತರಾಟೆ ತೆಗೆದುಕೊಂಡರು. ಡಿಡಿಪಿಐ ಮತ್ತು ಬಿಇಓ ಅವರ ಮೇಲೆ ಶಿಸ್ತು ಕ್ರಮ ಜರುಗಿಸಲು ಸಿಎಂ ಅವರು ಸೂಚನೆ ನೀಡಿದರು.

### ವಿಜಯನಗರ ಜಿಲ್ಲೆಗೆ ಪ್ರಭಾರಿ ಡಿಡಿಪಿಐ ಹನುಮಕ್ಕ



**ಹಂಪಿ ಟೈಮ್ಸ್ ಹೊಸಪೇಟೆ:** ವಿಜಯನಗರ ಜಿಲ್ಲೆಯ ಪ್ರಭಾರಿ ಉಪನಿರ್ದೇಶಕರಾಗಿ ಹನುಮಕ್ಕ ಇವರು ಶುಕ್ರವಾರ ನೇಮಕಗೊಂಡಿದ್ದಾರೆ. ಸದ್ಯ ಇವರು ಬಳ್ಳಾರಿಯ ಡಯಟ್ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿಜಯನಗರ ಜಿಲ್ಲೆಯ ಉಪನಿರ್ದೇಶಕರ ಹುದ್ದೆಯು ಹೆಚ್ಚುವರಿ ಪ್ರಭಾರವಾಗಿದೆ. ವಿಜಯನಗರ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯನವರು ವಿಜಯನಗರ ಜಿಲ್ಲೆಯ ಶೈಕ್ಷಣಿಕ ಗುಣಮಟ್ಟ ಕುಸಿಯಲು ಕಾರಣೀಭೂತರಾಗಿ ಕತ್ಯವ್ಯಲೋಪ ವೆಸಗಿದ ಹಿನ್ನೆಲೆಯಲ್ಲಿ ಉಪನಿರ್ದೇಶಕರಾಗಿದ್ದ ಯುವರಾಜ ನಾಯ್ಕ ಇವರನ್ನು ಅಮಾನತ್ತುಗೊಳಿಸಿ ಆದೇಶ ಹೊರಡಿಸಿದ್ದಾರೆ.

# ವರ್ಷ ತುಂಬಿದ ಪತ್ರಿಕೆಗೆ ಶುಭ ಹಾರೈಸಿದ ಗಣ್ಯರು

**ಹಂಪಿ ಟೈಮ್ಸ್ ಹೊಸಪೇಟೆ**

ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಜನರ ಧ್ವನಿಯಾದ ಹಂಪಿ ಟೈಮ್ಸ್‌ಗೆ ಮೊದಲ ವರ್ಷದ ಹರ್ಷ. ಅವಳಿ ಜಿಲ್ಲೆ ಸೇರಿದಂತೆ ಕೊಪ್ಪಳ, ರಾಯಚೂರು ಜಿಲ್ಲೆ ಮತ್ತು ರಾಜ್ಯದ ಪ್ರಮುಖ ಸುದ್ದಿಗಳನ್ನು ನಿತ್ಯವೂ ಪ್ರಕಟಿಸುವುದರೊಂದಿಗೆ ಎಲ್ಲ ವರ್ಗದ ಜನರಿಗೆ ಉಪಯುಕ್ತವಾದ ಮಾಹಿತಿಯೊಂದಿಗೆ ಪ್ರಕಟಿಸಲಾಗುತ್ತಿದೆ. ಪತ್ರಿಕೆಯಲ್ಲಿ ಸಾಹಿತಿಗಳ ಭರಪೂರ ಲೇಖನಗಳು ಹಾಗೂ ಯುವ ಸಾಹಿತಿಗಳ ಲೇಖನಗಳನ್ನು ಪ್ರಕಟಿಸುವುದರೊಂದಿಗೆ ಪ್ರೋತ್ಸಾಹವನ್ನು ನೀಡಲಾಗುತ್ತಿದೆ ಎಂದು ಗಣ್ಯರು ಹೃದಯಪೂರ್ವಕವಾಗಿ ಅಭಿನಂದಿಸಿ, ಶುಭಹಾರೈಸಿದರು.

ಪತ್ರಿಕೆಯ ಕಚೇರಿಯಲ್ಲಿ ಶುಕ್ರವಾರ ಸಂಜೆ ನಾಡ ಅಧಿದೇವತೆ ಹಂಪಿ ಶ್ರೀ ವಿರೂಪಾಕ್ಷೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಲಾಯಿತು. ನಂತರ ಕಚೇರಿಗೆ ಹೊಸಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಚನ್ನಬಸಪ್ಪ, ವೀರಶೈವ ಲಿಂಗಾಯತ ಸಮಾಜದ ಹಿರಿಯ ಮುಖಂಡರು ಸಾಲಿ ಸಿದ್ದಯ್ಯಸ್ವಾಮಿ, ಲೇಖಕರಾದ ಎಂ.ಎಂ.ಶಿವಪ್ರಕಾಶ್, ಬಿ.ಎಂ.ರಾಜಶೇಖರ, ಶಿಕ್ಷಣ ಇಲಾಖೆಯ ಕಡ್ಲಿ ವೀರಭದ್ರೇಶ್ವರ, ಕೆ.ಬಸವರಾಜ, ಸರಳಾ ವೆಂಕಟೇಶ, ಉದ್ಯಮಿ ಡಿ.ವೆಂಕಟೇಶ, ಆರೋಗ್ಯ ಇಲಾಖೆಯ ಎಂ.ಧರ್ಮನಗೌಡ, ಕರ್ನಾಟಕ ರಾಜ್ಯ ಪತ್ರಕರ್ತರ ಸಂಘದ ವಿಜಯನಗರ ಜಿಲ್ಲಾಧ್ಯಕ್ಷ ಬಿ.ಎಚ್.ಎಸ್. ರಾಜು, ಪತ್ರಕರ್ತರಾದ ಪ್ರಕಾಶ ಕಾಕುಬಾಳು, ಸೋಮಶೇಖರ ಹಿರೇಮಠ, ರಾಮಜೀ ನಾಯಕ, ನಾಗರಾಜ, ಎನ್.ಎಂ.ಸೌದಾಗರ್ ಸೇರಿದಂತೆ ಅನೇಕ ಗಣ್ಯರು, ಓದುಗರು, ಹಿತೈಷಿಗಳು ಆಗಮಿಸಿ ಶುಭ ಕೋರಿದರು.









# ವಿಜ್ಞಾನ

## ನಮಗೆ ಸೀನು ಯಾಕೆ ಬರುತ್ತೆ?

■ ಆರ್.ಬಿ.ಗುರುಬಸವರಾಜ

ಹೊರಗೆ ಆಟವಾಡಲು ಹೋಗಿದ್ದ ಧನ್ವಿತ ಒಳಗೆ ಬರುತ್ತಿದ್ದಂತೆ ಸೀನು ಹಾಕಿದಳು. 'ಅಯ್ಯೋ! ಕಂದಾ ಹೊಸ್ತಿಲ ಮೇಲೆ ಸೀನು ಹಾಕಿದೆಯಾ?' ಎಂದಳು ಅಮ್ಮ. ಇಲ್ಲಮ್ಮ ಎಂದು ಒಳಗೆ ಹೋಗಿ ಕೈಕಾಲು ಮುಖ ತೊಳೆದು ಬಂದಳು ಧನ್ವಿತ. "ಅಮ್ಮಾ, ನಮಗೆ ಸೀನು ಯಾಕೆ ಬರುತ್ತಮ್ಮ?" ಎಂದು ತನ್ನ ಮುಗ್ಧ ಪ್ರಶ್ನೆಯನ್ನು ಹಾಕಿದಳು. ಅಮ್ಮ ದೀರ್ಘ ವಿವರಣೆ ನೀಡಿದಳು.

ಸೀನುವಿಕೆಯು ಒಂದು ಪ್ರತಿಫಲಿತ ಕ್ರಿಯೆಯಾಗಿದ್ದು, ಮೂಗಿನ ಒಳಪದರಕ್ಕೆ ಕಿರಿಕಿರಿಯಾದಾಗ ಸಂಭವಿಸುತ್ತದೆ. ಧೂಳು, ಪರಾಗ, ಹೊಗೆ, ವೈರಸ್‌ಗಳಂತಹ ಉದ್ರೇಕಕಾರಿಗಳು ಮತ್ತು ಅನ್ಯ ಪದಾರ್ಥಗಳು ಮೂಗಿನ ನಾಳವನ್ನು ಪ್ರವೇಶಿಸಿದಾಗ ನಾಳಗಳಿಗೆ ಕಿರಿಕಿಯಾಗುತ್ತದೆ. ಇವುಗಳನ್ನು ಹೊರಹಾಕಲು ಸೀನು ಬರುತ್ತದೆ. ಉದ್ರೇಕಕಾರಿಯು ಮೂಗಿನ ಮಾರ್ಗದಲ್ಲಿ ನರಗಳನ್ನು ಉತ್ತೇಜಿಸಿದಾಗ, ಮೆದುಳು ಸೀನುವಿಕೆಯಲ್ಲಿ ಒಳಗೊಂಡಿರುವ ಸ್ನಾಯುಗಳಿಗೆ ಸಂದೇಶವನ್ನು ಕಳುಹಿಸುತ್ತದೆ. ಈ ಸಮಯದಲ್ಲಿ ಶ್ವಾಸಕೋಶದ ಗಾಳಿಯು ಮೂಗು ಮತ್ತು ಬಾಯಿಯ ಮೂಲಕ ಹಠಾತ್ ಮತ್ತು ಬಲವಂತವಾಗಿ



ಹೊರಹೋಗುತ್ತದೆ. ಆ ಮೂಲಕ ಉದ್ರೇಕಕಾರಿಗಳನ್ನು ದೇಹದಿಂದ ದೂರ ಇಡುತ್ತದೆ. ಸೀನುವಿಕೆಯ ಉದ್ದೇಶವು ಹಾನಿ ಅಥವಾ ಅಸ್ವಸ್ಥತೆಯನ್ನು ಉಂಟು ಮಾಡುವ, ಕಿರಿಕಿರಿಯುಂಟು ಮಾಡುವ ಅಥವಾ ಅನ್ಯ ಕಣಗಳನ್ನು ಮೂಗಿನ ಮಾರ್ಗ ಮತ್ತು ಗಂಟಲಿನಿಂದ ತೆರವುಗೊಳಿಸುವುದು ಆಗಿದೆ. ಗಾಳಿಯ ಹೊರಹಾಕುವಿಕೆಯು ಮೂಗಿನ ಮಾರ್ಗ ಮತ್ತು ಗಂಟಲಿನಿಂದ ಕಿರಿಕಿರಿಯನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ ಮತ್ತು ಶ್ವಾಸಕೋಶಕ್ಕೆ ಅನ್ಯ ವಸ್ತುಗಳು ಮತ್ತು ವೈರಸ್‌ಗಳು ಪ್ರವೇಶಿಸುವುದನ್ನು ತಡೆಯುತ್ತದೆ.

ಸೀನುವ ಸಮಯದಲ್ಲಿ ಎದೆ ಮತ್ತು ಗಂಟಲಿನ ಸ್ನಾಯುಗಳು ಸಂಕುಚಿತಗೊಳ್ಳುತ್ತವೆ. ಮೂಗು ಮತ್ತು ಬಾಯಿಯಲ್ಲಿರುವ ಸ್ನಾಯುಗಳು ವಿಶ್ರಾಂತಿ ಪಡೆಯುತ್ತವೆ ಮತ್ತು ದೇಹದಿಂದ ಗಾಳಿಯು ಗಂಟೆಗೆ 150 ಕಿ.ಮೀ ವೇಗದಲ್ಲಿ ಬಲವಂತವಾಗಿ ಹೊರಹಾಕಲ್ಪಡುತ್ತದೆ. ಗಾಳಿಯ ಬಲವಂತದ ಹೊರಹಾಕುವಿಕೆಯು ಮೂಗಿನ ಹಾದಿಗಳಿಂದ ಕಿರಿಕಿರಿಯನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಉಸಿರಾಟದ ವ್ಯವಸ್ಥೆಗೆ ಅನ್ಯ ವಸ್ತು ಪ್ರವೇಶಿಸುವುದನ್ನು ತಡೆಯುತ್ತದೆ.

ಕೆಲವು ಸಂದರ್ಭಗಳಲ್ಲಿ ಸೀನುವಿಕೆಯು ಅಲರ್ಜಿಗಳು, ಶೀತಗಳು ಮತ್ತು ಜ್ವರಗಳಂತಹ ಕೆಲವು ವೈದ್ಯಕೀಯ ಪರಿಸ್ಥಿತಿಗಳ ಲಕ್ಷಣವಾಗಿದೆ. ನಿರಂತರ ಸೀನುವಿಕೆಯು ಕೆಲ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಿರಬಹುದು. ಇಂತಹ ಸಮಯದಲ್ಲಿ ವೈದ್ಯರನ್ನು ಭೇಟಿಯಾಗುವುದು ಉಚಿತ.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

## ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲಸಾಹಿತ್ಯ ಪುರಸ್ಕೃತರ ಕೃತಿಗಳ ನೋಟ

# ಮಕ್ಕಳ ಸಾಹಿತ್ಯದ ಭೂಮಂತ್ರಯ್ಯ ಕೃಷ್ಣಮೂರ್ತಿ ಬಿಳಿಗೆರೆ

ಕೃಷ್ಣಮೂರ್ತಿ ಬಿಳೆಗೆರೆ ಹಲವಾರು ಸೃಜನಶೀಲ ಆಸಕ್ತಿಗಳನ್ನು ಹೊಂದಿದವರು. ಕನ್ನಡ ಸಾಹಿತ್ಯದಲ್ಲಿ ತತ್ತ್ವಪದ ಗಾಯನ, ಕಾವ್ಯ, ಕತೆ, ನಾಟಕ ರಚನೆ ಈ ರೀತಿ ವೈವಿಧ್ಯಮಯ ಸಾಹಿತ್ಯ ರಚನೆಯ ಮುಖಾಂತರ ಗಮನ ಸೆಳೆದವರು. ವೃತ್ತಿಯಲ್ಲಿ ಕಾಲೇಜು ಪ್ರಾಂಶುಪಾಲರಾಗಿ, ನಿರ್ದೇಶಕರಾಗಿ ನಿವೃತ್ತರಾಗಿದ್ದರೂ ಪರಿಸರದ ಕುರಿತು ಹೆಚ್ಚು ಪ್ರೀತಿಯುಳ್ಳವರು. ಸಾವಯವ ಕೃಷಿ, ನಾಟಿಬೀಜ, ಮಳೆ ನೀರು ಸಂಗ್ರಹ, ಪರಿಸರ ಸಂರಕ್ಷಣೆ ಹೀಗೆ ಹತ್ತಾರು ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡುತ್ತಿದ್ದಾರೆ. ಸಹಜ ಕೃಷಿ ಮತ್ತು ಮಳೆ ನೀರಿನ ಕುರಿತು ಸ್ವತಃ ತಾವು ಪ್ರಾಯೋಗಿಕವಾಗಿ ಮಾಡುತ್ತಾ ಇತರರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಪರಿಸರ ಅದರಲ್ಲೂ ನೀರಿನ ಕುರಿತು ಜಲ ಸಂಸ್ಕೃತಿಯ ಅವರ ಒತ್ತಾಸೆಯನ್ನು ಕೃತಿಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಅವರ 'ಗಾಯಗೊಂಡಿದೆ ಗರಿಕೆ ಗಾನ', 'ಮಳೆ ನೀರ ಕುಡಿ', 'ಅನ್ನದೇವರ ಮುಂದೆ', 'ಬಿಸ್ಲುಬಾಳೆ ಹಣ್ಣು ಇತರ ಪ್ರಬಂಧಗಳು' ಸೇರಿದಂತೆ ಹಲವು ಕೃತಿಗಳು ಹೆಚ್ಚು ಗಮನ ಸೆಳೆದಿವೆ.

ಕೃಷ್ಣಮೂರ್ತಿ ಬಿಳೆಗೆರೆಯವರು ದೊಡ್ಡವರಿಗೆ ಬರೆದಂತೆಯೇ ಅವರು ವಿಶೇಷ ಮುತುವರ್ಜಿವಹಿಸಿ ಮಕ್ಕಳಿಗೂ ಹಾಡು, ನಾಟಕ, ಕತೆಗಳನ್ನು ಬರೆದಿದ್ದಾರೆ. 'ಗುಡು ಗುಡು ಗುಡ್ಡ', 'ಜೀರಿಂಬೆ ಹಾಡು', 'ಪದ್ಯದ ಮರ', 'ಡ್ರೂ ಡ್ರೂ ಡ್ರೂಟೆ', 'ಹಾಡೆ ಸುವ್ವಿ', ಇವು ಮಕ್ಕಳ ಕವಿತಾ ಸಂಕಲನಗಳು. 'ಮಳೆಹುಚ್ಚ', 'ನವಿಲೂರಿನ ಕಥೆ', 'ಅಗಲ ಕಿವಿಯ ಅರಿವುಗಾರ', 'ಅಂಗ ಭಂಗದ ರಾಜ್ಯದಲ್ಲಿ', 'ಕತ್ತೆ ಹಾಡು' ನಾಟಕಗಳು. 'ಚಗಚೆ ಹೂವಿನ ಹುಡುಗಿ' ಮಕ್ಕಳ ಕಥಾ ಸಂಕಲನಗಳ ಮೂಲಕ ಮಕ್ಕಳ ಗಮನ ಸೆಳೆದಿದ್ದಾರೆ. ಇವೆಲ್ಲಕ್ಕೂ ಮುಕುಟವಿಟ್ಟಂತೆ 2024ನೇ ಸಾಲಿನಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಕೊಡುವ ಅತ್ಯುತ್ತಮ ಮಕ್ಕಳ ಸಾಹಿತ್ಯ ಕೃತಿಗೆ ಜಿ.ಎನ್. ಮೋಹನ್ ಅವರ ಬಹುರೂಪಿ ಪ್ರಕಟಿಸಿರುವ ಇವರ "ಭೂಮಂತ್ರಯ್ಯನ ಕಥೆಗಳು" ಕೃತಿ ಆಯ್ಕೆಯಾಗಿದೆ. ಮಕ್ಕಳ ಸಾಹಿತ್ಯದಲ್ಲಿ ಹೊಸತನಕ್ಕೆ ಸದಾ ಹಾತೊರೆಯುವ ಭೂಮಂತ್ರಯ್ಯ ಕೃಷ್ಣಮೂರ್ತಿ ಬಿಳೆಗೆರೆಯವರ ಕೆಲವು ಮಕ್ಕಳ ಕೃತಿಗಳ ಅವಲೋಕನ ಈ ಲೇಖನದಲ್ಲಿದೆ.

ಕೃಷ್ಣಮೂರ್ತಿ ಬಿಳಿಗೆರೆಯವರ 'ಮಳೆಹುಚ್ಚ' ನಾಟಕದ ಹೆಸರೇ ಅಚ್ಚರಿ ತರುತ್ತದೆ. ನಾಟಕವು ಯಾವುದಕ್ಕೆ ಪ್ರಾಮುಖ್ಯತೆ ನೀಡುತ್ತಿದೆ ಎನ್ನುವುದನ್ನು ಅದೇ ಖಚಿತಪಡಿಸುತ್ತದೆ. ಮನುಷ್ಯನು ತನ್ನ ಆಸೆ ತೀರಿಸಿಕೊಳ್ಳಲು ಪರಿಸರವನ್ನು ಮನಸೋಇಚ್ಛೆ ಬಳಸಿಕೊಂಡಿದ್ದಾನೆ. ಅದರ ಪರಿಣಾಮ ಪರಿಸರದಲ್ಲಿ ಅಸಮತೋಲನ ಉಂಟಾಗಿ ನೀರಿನ ಹಾಹಾಕರ ಎಲ್ಲೆಡೆ ಎದ್ದಿದೆ. ಇದನ್ನೇ ನಾಟಕವು ಕೇಂದ್ರೀಕರಿಸುತ್ತಾ, ಆ ನಿಟ್ಟಿನಲ್ಲಿ ಗಮನ ಸೆಳೆಯಲು ಪ್ರಯತ್ನಿಸಿರುವ ರೀತಿ ಅಮೋಘವಾದದ್ದು.



ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹಗರಿಬೊಮ್ಮನಹಳ್ಳಿ

Hampi Times E-paper
SCAN AND READ

ಕೃತಿಯಲ್ಲಿ ದೊಡ್ಡವರು ಪರಿಸರ ನಾಶವನ್ನು ಮಾಡಿದ್ದು, ಅದನ್ನು ಮತ್ತೆ ಸರಿ ಪಡಿಸಲು ಸಿದ್ಧರಾಗುತ್ತಿಲ್ಲ ಎನ್ನುವ ನಿಲುವು ವಾಸ್ತವದಲ್ಲಿನ ಜಾಗತಿಕ ಅನುಭವದ ನಿಲುವಿಗೆ ಅನುಗುಣವಾಗಿದೆ. ಜೊತೆಗೆ ಮಕ್ಕಳ ಪ್ರಯತ್ನ-ನಂಬಿಕೆಗಳಿಗೆ ದೊಡ್ಡವರು ಇನ್ನಾದರೂ ಮನ್ನಣೆ ನೀಡಬೇಕು ಎಂಬ ಅಂಶವನ್ನು ಕೃತಿ ಸೂಕ್ಷ್ಮವಾಗಿ ಚಿತ್ರಿಸುತ್ತದೆ. ಹದಗೆಟ್ಟ ಪರಿಸರವನ್ನು ಮತ್ತೆ ಸರಿದಾರಿಗೆ ತರುವ ಮೂಲಕ ನಾಟಕವು ಮಕ್ಕಳ ಮುಖಾಂತರ ಪರಿಸರವನ್ನು ಆರಾಧಿಸುವ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ನಾಟಕ ಪ್ರಾರಂಭದಿಂದ ಕೊನೆಯವರೆಗೂ ತನ್ನ ಪರಿಸರ ಪ್ರೇಮದ ಗುಟ್ಟು ಬಿಟ್ಟುಕೊಡದೆ ಕೊನೆಯಲ್ಲಿ ಮಾತ್ರ ವಿಚಿತ್ರ ತಿರುವನ್ನು ಪಡೆಯುತ್ತದೆ. ಪರಿಸರವನ್ನು ರಕ್ಷಿಸುವ ಸರಳ ಸೂತ್ರವನ್ನೂ ಕೃತಿ ತಿಳಿಸುತ್ತಾ ಅದು ದೊಡ್ಡ ಹಂಬಲವಾಗಿ ರೂಪಗೊಳ್ಳಬೇಕು ಎನ್ನುವ ಮನೋಭಾವನೆ ಇದರ ಹಿಂದಿದೆ.

ಕೃಷ್ಣಮೂರ್ತಿಯವರ ಮಕ್ಕಳ ಕವನ ಸಂಕಲನ 'ಗುಡುಗುಡು ಗುಡ್ಡ'. ಇದರಲ್ಲಿ ಮಕ್ಕಳ ಅನುಭವಕ್ಕೆ ನಿಲುಕುವಂತಹ ಕವನಗಳಿವೆ. ಡಾ.ಶಿವರಾಮ ಕಾರಂತರು 'ಮಕ್ಕಳ ಪದ್ಯ ಗದ್ಯ ಏನೇ ಇದ್ದರೂ ಅದು ಉಪದೇಶವನ್ನು ಮಾಡಬೇಕೆಂಬ ಹುಚ್ಚು ನಮ್ಮನ್ನು ಪೀಡಿಸಬೇಕಾದ ಕಾರಣವಿಲ್ಲ' ಎನ್ನುವ ಮಾತುಗಳಿಗೆ ಅನ್ವಯವಾಗುವಂತೆ ಇಲ್ಲಿನ ಕವನಗಳು ಕಾಣುತ್ತವೆ. ಇಲ್ಲಿನ ಕವನಗಳು ಒಂದು ನೆಲೆಗಟ್ಟಿನಲ್ಲಿ ರಚನೆಯಾಗದೇ, ಪರಿಸರದ ಎಲ್ಲಾ ಮಜಲುಗಳನ್ನೂ ಒಳಗೊಂಡಿವೆ. ಬೀಸುವ ತಂಗಾಳಿ, ಸುಂದರವಾಗಿ ಅರಳಿ ಪರಿಮಳ ಸೂಸುವ ಹೂವುಗಳು, ಮನುಷ್ಯನಂತೆ ಮಾತನಾಡುವ ಪ್ರಾಣಿ-ಪಕ್ಷಿಗಳು, ಗಿಡಮರಗಳ ಜೊತೆ ಭೂಮಿಯೂ ಮಾತನಾಡುತ್ತದೆ. ಅವುಗಳ ಜೊತೆ ಸಂಭಾಷಿಸುವ ಮೂಲಕ ಪರಿಸರದ ಕುರಿತ ಎಚ್ಚರಿಕೆಯನ್ನೂ ಆ ಕವನಗಳು ನೀಡುವುದನ್ನು ಕವಿ ಮರೆತಿಲ್ಲ.

ಇವರ ಮತ್ತೊಂದು ಮಕ್ಕಳ ಪದ್ಯಗಳ ಸಂಕಲನ 'ಹಾಡೆ ಸುವ್ವಿ'. ಇದರಲ್ಲಿ ಮಕ್ಕಳ ಪ್ರತಿನಿಧಿಗಳು ಎಂಬಂತೆ ಸುವ್ವಿ ಮತ್ತು ಚಂದು ಎನ್ನುವ ಪರಿಸರಪರವಾದ ಎರಡು ಪಾತ್ರಗಳು ಮತ್ತೆ ಮತ್ತೆ ಕಾಣಿಸುತ್ತವೆ. ದೊಡ್ಡವರನ್ನು ಪ್ರಶ್ನಿಸುತ್ತಾ ಪರಿಸರ ಕುರಿತು ಹೆಚ್ಚು ವ್ಯಾಪಕ ನೋಟ ಸಿಗುವಂತೆ ಈ ಕವನಗಳು ಮಾಡುತ್ತವೆ. ಇತರೆ ಕಾವ್ಯಗಳಿಗಿಂತ ಇವು ಬೇರೆಯಾಗಿ ನೋಡುವಂತಿವೆ. ಕಾವ್ಯದ ಕುರಿತಾಗಿ ಇರುವ ಎಲ್ಲರ ನಂಬಿಕೆಗಳನ್ನು ಇಲ್ಲಿನ ಮಕ್ಕಳ ಕಾವ್ಯಗಳು ತೆಲೆಕೆಳಗು ಮಾಡಿಬಿಡುತ್ತವೆ. ಉಪದೇಶ ನೀಡುವ ರಾಷ್ಟ್ರೀಯವಾದದ ದೊಡ್ಡರೋಗದಿಂದ ಇವು ಪೂರ್ಣ ಹೊರತಾಗಿರುವುದ ಮಕ್ಕಳ ಸಾಹಿತ್ಯ ಯಾವದಿಕ್ಕಿನತ್ತ ಹೊರಳುತ್ತಿದೆ ಎನ್ನುವುದಕ್ಕೆ ದಿಕ್ಸೂಚಿಯಂತೆ ಪರಿಗಣಿಸಬಹುದು. ನಿಸರ್ಗಪರವಾದ ಒಲವನ್ನು ವಿಸ್ತರಿಸುವ ನಿಟ್ಟಿನಲ್ಲಿ ಕವನಗಳು ರೂಪಕಗಳಂತೆ ಗೋಚರಿಸುತ್ತವೆ.



'ಕಲ್ಲು ಕಲ್ಲಲು ಚಿತ್ರ ಇರುತ್ತೆ' ಎನ್ನುವ ಕವನದಲ್ಲಿನ ಕೊನೆಯ ಸಾಲುಗಳು

**"ಮರ ಗಿಡದಲ್ಲಿ ಚಿತ್ರ ಇರುತ್ತೆ, ಕಣ್ಣಲಿ ಕಣ್ಣಿಟ್ ನೋಡು,**
**ಚಿತ್ರದ ಒಳಗೇ ಬಣ್ಣ ಇರುತ್ತೆ, ನೀನು ಸುಮ್ಮನೆ ಇದ್ದುಬಿಡು"**

ಎನ್ನುವ ಕವನದ ಧಾಟಿಯೂ ಪರಿಸರದ ಕುರಿತಾದ ಗೂಡಾರ್ಥವನ್ನು ವಿಶ್ಲೇಷಿಸುವಂತೆ ಮಾಡುತ್ತದೆ. ಮರ ಗಿಡಗಳೂ ನಮ್ಮಂತೆ ಜೀವಿಗಳು, ಅವುಗಳ ಬದುಕು ವರ್ಣಮಯವಾಗಿ ಸುಂದರವಾಗಿರುತ್ತವೆ. ಆದರೆ ಅದನ್ನು ನೋಡಲು ಒಳಗಣ್ಣನ್ನು ತೆರೆಯಬೇಕು ಎಂದು ಕವನ ಹೇಳುತ್ತಲೇ, ಅದನ್ನು ಗಮನಿಸಿ ಸಂತಸಪಡುವುದನ್ನು ಕಲಿಯಬೇಕು ಎಂಬುದನ್ನು ಅರುಹುತ್ತದೆ. ಮರಕ್ಕೆ ಒಳಿತು ಮಾಡಲು ಸಾಧ್ಯವಿಲ್ಲದಿದ್ದರೂ ಪರವಾಗಿಲ್ಲ, ಸುಮ್ಮನಿದ್ದರೇ ಅದೇ ಪ್ರಕೃತಿಗೆ ಕೊಡುವ ಬಹುದೊಡ್ಡ ಕೊಡುಗೆಯಾಗುತ್ತದೆ ಎನ್ನುವ ವಿಶೇಷ ಅರ್ಥದ ಮೂಲಕ ಕವನವು ಪ್ರಕೃತಿ ದರ್ಶನವನ್ನು ಮಾಡಿಸುತ್ತದೆ. ಮನುಷ್ಯ ನಿಸರ್ಗವನ್ನು ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ಹಾಳು ಮಾಡಿದ್ದಾನೆ. ಅವನು ಇನ್ನು ಮುಂದೆ ಅದಕ್ಕೆ ಒಳಿತುಮಾಡಲಾಗದಿದ್ದರೂ ಪರವಾಗಿಲ್ಲ ಸುಮ್ಮನಿದ್ದರೆ ಸಾಕು ಎನ್ನುವ ಅರ್ಥದಲ್ಲಿ ಇದನ್ನು ನೋಡಬೇಕು. ಜೊತೆಗೆ ಇತರೆ ಕವನಗಳು ಮಣ್ಣಿನಲ್ಲಿ, ಹಸಿರಿನಲ್ಲಿ, ಗಿಡಮರಗಳಲ್ಲಿ, ಹುಳು ಹುಪ್ಪಟೆಗಳಲ್ಲಿ, ಬೆಟ್ಟಗುಡ್ಡಗಳಲ್ಲಿ ಅರಳಿನಿಂತಿವೆ. ಆ ಮೂಲಕ ಪ್ರಕೃತಿಯ ಅತ್ಯಂತ ಸಣ್ಣ ಪ್ರಾಣಿಗಳೂ ಜೀವನಾಡಿಯಾಗುವ ಬೆಡಗನ್ನು ಆ ಕವನಗಳಲ್ಲಿ ಕಾಣಬಹುದು.

ಪ್ರಸ್ತುತ ದಿನದಲ್ಲಿ ಮಕ್ಕಳ ಸಾಹಿತ್ಯ ಕೇವಲ ಪ್ರಾಸಬದ್ಧವಾಗಿದ್ದರೆ ಹೆಚ್ಚು ಮಹತ್ವ ಪಡೆಯುವುದಿಲ್ಲ. ಬದಲಾಗಿ ವೈಚಾರಿಕ ಚಿಂತನೆ ಮಾಡುತ್ತಾ ಮಕ್ಕಳಲ್ಲಿ ವೈಜ್ಞಾನಿಕ ಮನೊಭಾವ ಬೆಳೆಸುವಂತಿದ್ದರೆ ಹೆಚ್ಚು ಮೌಲ್ಯ ಪಡೆಯುತ್ತದೆ. ಈ ಹೊಸಕಾಲದಲ್ಲಿ ಜಗತ್ತಿನಲ್ಲಿ ನಡೆಯುತ್ತಿರುವ ವಾಸ್ತವದ ಸಂಗತಿಗಳನ್ನು ಮತ್ತು ಮಕ್ಕಳ ಭವಿಷ್ಯತ್ತಿಗೆ ನೆರವಾಗುವ ಅಂಶಗಳನ್ನು ಸಾಹಿತ್ಯದಲ್ಲಿ ತರಬೇಕು ಎನ್ನುವಂತ ಆಶಯದಲ್ಲಿ ಕೃಷ್ಣಮೂರ್ತಿಯವರ ಕವನ ಸಂಕಲನ 'ಭೂಮಿಯೊಂದು ಮಹಾಬೀಜ' ರಚನೆಯಾದಂತಿದೆ. ಪ್ರತಿ ಪದ್ಯದ ಶೀರ್ಷಿಕೆಯನ್ನು ಗಮನಿಸಿದರೆ ಸಾಕು ಕವಿ ತನ್ನೊಳಗಿನ ಪ್ರಕೃತಿಯ ಕಳ್ಳುಬಳ್ಳಿಯ ಸಂಬಂಧವನ್ನೇ ಹೇಗೆ ಪದವಾಗಿಸುತ್ತಾನೆ ಎನ್ನುವುದು ಅರ್ಥವಾಗುತ್ತದೆ.

ಕೃತಿಯಲ್ಲಿನ ಪದ್ಯಗಳು ಪುಟ್ಟ ಮಕ್ಕಳ ಭವ್ಯ ಭವಿಷ್ಯತ್ತಿಗೆ ಬಯಸುವ ಕರ್ತವ್ಯದಂತಿರದೆ, ಒಳಗಿನ ಕಳಕಳಿ, ಮಕ್ಕಳ ಭವಿಷ್ಯವನ್ನ ದೂರದ ಕಣ್ಣಿಂದ ನೋಡುವ ಆಕಾಂಕ್ಷೆಗಳಂತೆ ಅವು ಗೋಚರಿಸುತ್ತವೆ. ಆ ಮೂಲಕ ಅವು ಪರಿಸರದಲ್ಲಿನ ಮಹತ್ತರವಾದ ಅಂಶಗಳಾದ ನೀರು, ಮರ, ಮಳೆ, ಪಕ್ಷಿ, ಪ್ರಾಣಿಗಳ ಕುರಿತಾಗಿ ಗಮನ ಸೆಳೆಯುತ್ತವೆ. ನಾಗರೀಕತೆಯ ನಾಜೂಕಿಗಿಂತ ಪ್ರಕೃತಿ ಸಾನಿಧ್ಯಕ್ಕೆ ಹಿಂತಿರುಗುವ ಅಸೆ ಮನುಕುಲದ ಗಾಢ ಹಂಬಲಗಳಲ್ಲೊಂದು ಎನ್ನುವಂತೆ ಇಲ್ಲಿನ ಪದ್ಯಗಳನ್ನು ಗಮನಿಸಿದಾಗ ಸೂಕ್ಷ್ಮವಾಗಿ ಅರಿವಿಗೆ ಬರುತ್ತದೆ.


ಅವರ 66 ಮಕ್ಕಳ ಕವಿತೆಗಳ ಸಂಕಲನ 'ಪದ್ಯದ ಮರ'. ಕವಿಯು ಕೃತಿಗೆ ಇಡುವ ಶೀರ್ಷಿಕೆಯಲ್ಲಿಯೂ ಹೊಸತನದ ಜೊತೆ ಆಕರ್ಷಕ ಎನ್ನುವಂತೆ ಮಾಡಿದ್ದಾರೆ. ಇಲ್ಲಿರುವ ಎಲ್ಲಾ ಕವಿತೆಗಳು ಪ್ರಕೃತಿಯ ಕಾಳಜಿಯನ್ನು ಹೊದ್ದು ಮಲಗಿದಂತೆ ರಚನೆಯಾಗಿವೆ. ಈ ಸಂಕಲನದ ಕವಿತೆಗಳು ಮಕ್ಕಳಿಗೆ ಎಂದು ಹೇಳಿದ್ದರೂ ದೊಡ್ಡವರು ಕಣ್ಣುಬಿಟ್ಟು ನೋಡುವಂತೆ ಮಾಡುತ್ತವೆ. ಪರಿಸರದ ನೆಲ, ನೀರು, ಗಾಳಿ, ಬೆಳಕು ಹಾಗೂ ಸಕಲ ಜೀವರಾಶಿಗಳ ಮೇಲೆ ಆಧುನಿಕ ತಂತ್ರಜ್ಞಾನದ ನಾಗರಿಕ ಮನುಷ್ಯನು ಮಾಡುತ್ತಿರುವ ನಿರಂತರ ದಾಳಿಗಳಿಂದ ಅವು ನಲುಗಿಹೋಗಿವೆ. ಅದರಿಂದ ಸಾಮಾಜಿಕ ಮತ್ತು ಪ್ರಾಕೃತಿಕ ಪತನವನ್ನು ಕಾಣುವಂತಾಗಿದೆ ಎಂಬ ವಿನಾಶಕಾರಿ ರೂಪದ ಬಗೆಗೆ ಉತ್ಕಟ ಪ್ರತಿಕ್ರಿಯೆಯನ್ನು ಇಲ್ಲಿ ಗುರುತಿಸಬಹುದು. ಇನ್ನಾದರೂ ಬದಲಾಗಬೇಕಾದ ಅನಿವಾರ್ಯ ಸಂದಿಗ್ಧದಲ್ಲಿ ಮನುಷ್ಯ ನಿಂತಿದ್ದಾನೆ. ಅವನ ಮನೋಭಾವ ಹೇಗಿರಬೇಕು ಎನ್ನುವ ಆಯಾಮದಲ್ಲಿ ಪ್ರಕೃತಿ ಬಗೆಗಿನ ಉತ್ಕಟ ಪ್ರೇಮ ಮಾನವ ಬದುಕಿನಲ್ಲಿ ಭವಿಷ್ಯದ ಅಲೆಯಾಗಬೇಕು ಎಂಬುದನ್ನು ಇಲ್ಲಿನ ಕವಿತೆಗಳು ಗಟ್ಟಿನೆಲೆಯಲ್ಲಿ ಧ್ವನಿಸಿವೆ.

ಅದರಲ್ಲಿನ ಕೆಲವು ಕವನಗಳು ಪ್ರಾಣಿಜಗತ್ತನ್ನು ಅನಾವರಣ ಮಾಡುತ್ತವೆ. ಸಂತಸದಿಂದ, ಸ್ವತಂತ್ರವಾಗಿ ಬದುಕನ್ನು ನಡೆಸುತ್ತಿದ್ದ ಅವುಗಳ ಬದುಕಿನಲ್ಲಿ ಮನುಷ್ಯನ ಅನಾವಶ್ಯಕ ಪ್ರವೇಶದಿಂದ ಪ್ರಾಣಿಗಳ ಬದುಕು ನರಕ ಸದೃಶವಾಗಿದೆ. ಆದರೆ ಇದು ಮನುಷ್ಯನಿಗೆ ತಿಳಿಯುತ್ತಿಲ್ಲ ಎನ್ನುವ ನೋವನ್ನು ಕವನಗಳಲ್ಲಿ ಗುರುತಿಸಬಹುದು. ಆ ನಿಟ್ಟಿನಲ್ಲಿ 'ಮುದ್ದು ಮಕ್ಕಳಿಗೆ ಆನೆಯ ಪ್ರಶ್ನೆ' ಕವನವು ಕಾಡಿನಲ್ಲಿರುವ ಆನೆಯು ತನ್ನ ಕತೆಯನ್ನು ಮಕ್ಕಳ ಮುಂದಿಡುತ್ತದೆ. ಕಾಡಿನಲ್ಲಿ ಆನೆಯು ತನ್ನ ಗುಂಪಿನ ಜೊತೆ ಆಡುತ್ತಾ, ಬೇಕಾದ್ದನ್ನು ಸೇವಿಸುತ್ತಾ ಸಂತಸವಾಗಿತ್ತು. ಆ ಸಮಯದಲ್ಲಿ "ಎಂಥ ಸುಖ ಏನು ಕತೆ, ಜಿಂಕೆ ಜೊತೆ ಹುಲಿ ಚಿರತೆ, ಖೆಡ್ಡದೊಳಗೆ ಕೆಡವಿ ನನ್ನ, ತಂದರಿಲ್ಲಿ ಮೂರ್ಖರು" ಎಂದು ಮನುಷ್ಯರು ತನ್ನ ಬದುಕನ್ನು ನರಕಮಾಡಿದರು ಎಂದು ಹೇಳುತ್ತದೆ. ಮುಂದುವರೆದು "ಹೊಟ್ಟೆ ತುಂಬ ಇಲ್ಲ ಕೂಳು, ಇಲ್ಲ ಇಲ್ಲಿ ಒಳ್ಳೆ ನೀರು, ನೆರಳು ಇಲ್ಲ ಕೊರಳು ಇಲ್ಲ, ಅಂಕುಶವೆ ಇವರಿಗಿಲ್ಲ" ಎಂದು ತನ್ನ ಅಳಲನ್ನು ತೋಡಿಕೊಳ್ಳುತ್ತದೆ. "ನನ್ನ ದೇಹ ನಾಡಿನಲ್ಲಿ, ಮನಸು ಮಾತ್ರ ಕಾಡಿನಲ್ಲಿ, ಹೇಳಿ ಮುದ್ದು ಮಕ್ಕಳ, ನಾನು ಹೇಗೆ ಬದುಕಲಿ" ಎಂದು ಪ್ರಶ್ನಿಸುವ ರೀತಿ ಪ್ರಾಣಿಗಳ ಪ್ರತಿನಿಧಿಯಾಗಿ ತಾವು ಮಾನವನಿಂದ ಸಂಕಷ್ಟಕ್ಕೆ ಒಳಗಾಗುತ್ತಿವೆ. ಇನ್ನಾದರೂ ನಮ್ಮ ಕಾಡನ್ನು ಉಳಿಸಿ, ಅದರಲ್ಲಿ ನಮ್ಮನ್ನು ಸ್ವತಂತ್ರವಾಗಿರಲು ಬಿಡಿ ಎಂದು ಪ್ರಾಣಿಗಳ ಪರವಾಗಿ ಆನೆಯು ಗೋಗರೆಯುವಂತೆ ಕವನವು ರಚನೆಯಾಗಿದೆ. ಇದು ಬರೀ ಆನೆಯ ಧ್ವನಿಯಾಗಿರದೇ ಸಮಸ್ತ ಪ್ರಾಣಿಗ ಒಕ್ಕೊರಲಿನ ಆರ್ತನಾದ ಎಂದು ಮನುಷ್ಯ ಅರ್ಥಮಾಡಿಕೊಳ್ಳಬೇಕು ಎನ್ನುವ ಸ್ಪಷ್ಟವಾದ ಸಂದೇಶ ಇದರೊಳಗಿದೆ.

'ಚಗಚೆಹೂವಿನ ಹುಡುಗಿ' ಕಥಾ ಸಂಕಲನವನ್ನು ಎರಡು ವಿಭಾಗದಲ್ಲಿ ಅಂದರೆ ಹತ್ತು ಹನ್ನೆರೆಡು ವರ್ಷದ ಮಕ್ಕಳಿಗೆ ಮತ್ತು ಹದಿನೈದು ಹದಿನಾರು ವರ್ಷದ ಮಕ್ಕಳಿಗೆ ಎಂದು ಲೇಖಕರು ವಿಭಾಗಿಸಿದ್ದಾರೆ. ಇಲ್ಲಿನ ಎಲ್ಲಾ ಕಥೆಗಳೂ ಪರಿಸರ ಕಾಳಜಿಯ ಅಂಶಗಳನ್ನು ಪ್ರತಿಪಾದಿಸುತ್ತವೆ. ಎಲ್ಲಾ ಕಥೆಗಳೂ ಜನಪದದ ಜಾಡಿನ ಪ್ರೇರಣೆಯಿಂದ ರಚನೆಯಾದಂತೆ ಕಾಣುತ್ತವೆ. ಈ ಕಥಾ ಸಂಕಲನದಲ್ಲಿ ಪ್ರಕೃತಿ ಜೊತೆ ಮಾತನಾಡುವಂತಹ ಕತೆಗಳು ತಮ್ಮದೇ ಆದ ಪ್ರತಿಮಾಲೋಕವೊಂದನ್ನು ಸೃಷ್ಟಿಸುತ್ತವೆ. ಇದರಿಂದ ನೀರು, ಮರ, ಮಳೆ, ಹಕ್ಕಿ ಎಲ್ಲವೂ ರೂಪಕಗಳಾಗಿ ಅನುರಣಿಸುತ್ತಾ ಹೋಗುತ್ತದೆ. ಇವೆಲ್ಲವೂ ಪರಿಸರದ ಮುಗ್ಧ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತವೆ. ಪಾರಂಪರಿಕ ಜ್ಞಾನವನ್ನು ನಿರ್ಲಕ್ಷಿಸಿದ ಹಾಗೂ ತನ್ನ ಭೌತಿಕ ಸುಖಕ್ಕಾಗಿ ಪ್ರಕೃತಿಯನ್ನು ತನ್ನ ಅಳತೆಗೆ ಬಗ್ಗಿಸಿಕೊಂಡಿರುವ ಮಾನವನ ಮನೋಧೋರಣೆಯನ್ನು ಅಣಕಿಸುತ್ತವೆ. ಇಲ್ಲಿನ ಕಥೆಗಳು ಮನುಷ್ಯಕೇಂದ್ರಿತವಾಗದೇ ಪ್ರಕೃತಿ ಕೇಂದ್ರಿತವಾಗಿ ಕೃತಿಯಲ್ಲಿ ಗೋಚರಿಸುತ್ತವೆ.

ಬಿಳಿಗೆರೆ ಅವರ 'ಚಗಚೆ ಹೂವಿನ ಹುಡುಗಿ'ಕಥಾ ಸಂಕಲನ ಮತ್ತು 'ಅಂಗಭಂಗದ ರಾಜ್ಯದಲ್ಲಿ' ನಾಟಕಗಳು ಗಮನ ಸೆಳೆಯುತ್ತವೆ. ಮನುಷ್ಯ ತನ್ನ ಪರಿಸರ ವಿರೋಧಿಗುಣಗಳನ್ನು ತ್ಯಜಿಸಬೇಕು. ಆ ಮೂಲಕ ಗಿಡ-ಮರ, ಪಶು-ಪಕ್ಷಿಯಾಗಿ ಬದಲಾಗಬೇಕು ಎಂಬ ರೂಪಾಂತರೀಕರಣವು, ಅವರ ನೆಲೆಯಲ್ಲಿ ನಿಂತು ಅವುಗಳನ್ನು ನೋಡಿದಾಗಲೇ, ಸ್ಪಷ್ಟ ಚಿತ್ರಣ ಸಿಗಲು ಸಾಧ್ಯವಾಗುತ್ತದೆ. ಈ ಅಂಶವನ್ನು ಇಡೀ ಕೃತಿಯು ಅತ್ಯಂತ ಶಕ್ತಿಶಾಲಿಯಾಗಿ ಹಿಡಿದಿಟ್ಟಿದೆ. ಕೃತಿಯ ಅತ್ಯಂತ ಸರಳವಾಗಿ ಮತ್ತು ಅರ್ಥಪೂರ್ಣವಾಗಿ ಮಕ್ಕಳ ಮನಸ್ಸಿಗೆ ನಾಟುವಂತೆ ದಾಖಲಿಸಿರುವ ಕೃತಿಕಾರನಾ ರಚನಾ ಶೈಲಿಯು ಇಲ್ಲಿ ಗಮನಸೆಳೆಯುತ್ತದೆ.

"ಭೂಮಂತ್ರಯ್ಯನ ಕಥೆಗಳು" ಕೃತಿ ತೇಜಸ್ವಿಯವರ 'ಪರಿಸರದ ಕತೆ' ಬಿಜಿಎಲ್ ಸ್ವಾಮಿಯವರ 'ಹಸಿರು ಹೊನ್ನು'ಗಳ ಸಾಲಿನಲ್ಲಿ




ನಿಲ್ಲುತ್ತದೆ. ಹಸಿರಿನ ಒಳನೋಟಗಳು ಮತ್ತು ಕೃಷಿಯ ಆಧ್ಯಾತ್ಮ ಬೆರೆತಿರುವುದನ್ನು ಇದರಲ್ಲಿ ಕಾಣುತ್ತೇವೆ. ಕೃತಿಯುದ್ದಕ್ಕೂ ಒಬ್ಬ ಭೂಮಂತ್ರಯ್ಯನಿದ್ದಾನೆ. ಸಹಜ ಕೃಷಿಯ ಮಸನುಬು ಫುಕುವೋಕಾ, ನೀರಿನ ಕ್ರಾಂತಿಯ ರಾಜೇಂದ್ರ ಸಿಂಗ್, ವರ್ತೂರು ನಾರಾಯಣರೆಡ್ಡಿ, ಬಾಳೆಕಾಯಿ ಶಿವನಂಜಯ್ಯ, ಶ್ರೀಪಡ್ರೆ ಎಲ್ಲರೂ ಈ ಕೃತಿಯಲ್ಲಿ ಪರೋಕ್ಷವಾಗಿ ಕಾಣಿಸುತ್ತಾರೆ. ಕೃತಿಯು ಹಸಿರಿನ ಮಂತ್ರ, ನೀರಿನ ಮಂತ್ರ, ಖಗಮೃಗಗಳ ಮಂತ್ರ ಸೇರಿದಂತೆ ಅನೇಕ ಮಂತ್ರಗಳನ್ನು ಮಕ್ಕಳಿಗೆ ಉಣಬಡಿಸುತ್ತದೆ. ಸಸ್ಯಗಳು ಬೇರು ಬಿಡುವುದು, ಮೊಳಕೆಯೊಡೆಯುವುದು ಹೇಗೆ ಎಂಬುದನ್ನು ಕತೆಯಲ್ಲಿ ಕಾಣಬಹುದು. ಒಟ್ಟಾರೆಯಾಗಿ ಪುಸ್ತಕದಲ್ಲಿನ ಕಥೆಗಳಲ್ಲಿ ಭೂಮಂತ್ರಯ್ಯ ಹಸಿರಿನ ಪ್ರತಿನಿಧಿಯಾಗಿ ಮಕ್ಕಳ ಗಮನ ತಕ್ಷಣವೇ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾನೆ.

ಮಕ್ಕಳ ಮನಸ್ಸಿಗೆ ಫ್ಯಾಂಟಸಿ ತುಂಬಾ ಪ್ರಿಯವಾಗುತ್ತದೆ. ಮಕ್ಕಳ ಸಾಹಿತಿಗಳು ಅದನ್ನೆ ಬಳಸಿಕೊಳ್ಳುತ್ತಾ, ನಿಸರ್ಗದ ಯಾವುದೇ ಜೀವಚರವನ್ನು ಹಾಗೂ ಅವುಗಳ ಸಹಜ ಬದುಕಿಗೆ ಮಾನವನು ಹಾನಿಯುಂಟು ಮಾಡಿದರೆ ತಾನು ಹಾಳುಮಾಡಿದ ಜೀವಿಯಾಗಿ ಬದಲಾಗುವ ಶಿಕ್ಷೆ ಅನುಭವಿಸಬೇಕಾಗುತ್ತದೆ ಎನ್ನುವ ನಿಟ್ಟಿನಲ್ಲಿ ಕೃತಿಗಳನ್ನು ಬಿಳಿಗೆರೆ ಅವರು ರಚಿಸಿದ್ದಾರೆ. ಅಂದರೆ ಗಿಡ ಕಡಿದರೆ ತಾನೇ ಗಿಡವಾಗಿ ಬದಲಾಗುವುದು. ಜೀವಿಗಳ ನಾಶ ಮಾಡಿದರೇ ಅವನೇ ಆ ಜೀವಿಯಾಗಿ ಮಾರ್ಪಡುವುದು. ಹೀಗೆ ಬದಲಾಗುವುದರ ಜೊತೆ ಅವುಗಳ ಕಷ್ಟ ಅವನಿಗೆ ಅರಿವಾಗುವಂತಹ ರೀತಿಯಲ್ಲಿ ರಚಿಸಿದ್ದಾರೆ. ಈ ರೀತಿ ರೂಪಾಂತರದ ಕ್ರಿಯೆಯನ್ನು 'ರಿವರ್ಸ್ ಮೆಟಮಾರ್ಫಸಿಸ್' ಎನ್ನಬಹುದು. ಆದರೆ ಮಕ್ಕಳ ಸಾಹಿತ್ಯದಲ್ಲಿ ಅದು ಪಲಾಯನವಾಗದೇ, ಶಿಕ್ಷೆ ರೂಪದಲ್ಲಿ ಕಾಣುತ್ತಾ, ಪರಿಸರ ಪ್ರಜ್ಞೆಯ ನಿಟ್ಟಿನಲ್ಲಿ ತರ್ಕಿಸುವಂತೆ ಮಾಡುವುದನ್ನು ಕೃಷ್ಣಮೂರ್ತಿ ಬಿಳಿಗೆರೆ ಅವರ ರಚನೆಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಮಕ್ಕಳಿಗೆ ಸರಿಯಾದ ಮಾಹಿತಿ ತಲುಪಿಸಿ, ಅವರಿಗೆ ಮನವರಿಕೆ ಮಾಡಿದರೆ, ಜಗತ್ತನ್ನು ಸುಲಭವಾಗಿ ಸರಿದಾರಿಗೆ ತರಬಹುದು, ಎನ್ನುವ ಮನೋಭಾವದಲ್ಲಿ ಕೃಷ್ಣಮುರ್ತಿಯವರ ಮಕ್ಕಳ ರಚನೆಗಳೆಲ್ಲವೂ ಕಾಣಿಸುತ್ತವೆ. ಅವರು ಹುಡುಕಿದ ದಾರಿ ಇವತ್ತಿನ ವಾಸ್ತವ ಜಗತ್ತಿಗೆ ಅತ್ಯಂತ ಅಗತ್ಯವಾದ್ದದಾಗಿದೆ. ಕನ್ನಡದ ಬಾಲ ಸಾಹಿತ್ಯದಲ್ಲಿ ತಮ್ಮದೇ ಆದ ವಿಭಿನ್ನ ಹಾದಿ ತುಳಿದು ಯಶಸ್ಸನ್ನು ಕಂಡಿರುವ ಕೃಷ್ಣಮೂರ್ತಿ ಬಿಳೆಗೆರೆಯವರಿಗೆ ತಡವಾಗಿಯಾದರೂ ಸಂದಿರುವ ಕೇಂದ್ರ ಬಾಲ ಸಾಹಿತ್ಯ ಪುರಸ್ಕಾರವು ತನ್ನ ಮೌಲ್ಯವನ್ನು ಹೆಚ್ಚಿಸಿಕೊಂಡಿದೆ. ಕೃಷ್ಣಮೂರ್ತಿ ಬಿಳೆಗೆರೆಯವರಿಗೆ ಪತ್ರಿಕೆ ಪರವಾಗಿ ಅಭಿನಂದನೆಗಳು.

## ಕವಿ ಮನಸು

### ಸರಳ ಜ್ಞಾನ ಸಾಗರ

ಅಂದದ ಹಾಳೆಯ ಮೇಲೆ ಅಕ್ಷರಗಳ
ಆಡಂಬರ,
ಹೇರಳ ಸುದ್ದಿಯೀರೋ
ಸರಳ ಜ್ಞಾನ ಸಾಗರ,
ನಾಡ, ನುಡಿ, ಭಾಷೆ,
ಸ್ಫೂರ್ತಿ ಕಥೆಗಳ ಹಂದರ,
ಗಲ್ಲಿ ರಾಜ್ಯ ದೇಶಗಳ
ಸಮಗ್ರ ಮಾಹಿತಿ ಸಮಾಚಾರ,
ನಮ್ಮ ಸೊಗಡಿನ,
ಕನ್ನಡತನದ ಪತ್ರಿಕೆ
ಹಂಪಿ ಟೈಮ್ಸ್ ಗೆ ವಾರ್ಷಿಕ ಉತ್ಸವ,
ವಿಜಯೋತ್ಸವ.

– **ಯರಿಯಕ್ಕ**, ಉಪನ್ಯಾಸಕರು,
ವಿಜಯನಗರ ಕಾಲೇಜ್

### ಪತ್ರಿಕೆ ಚಿಕ್ಕದಾದರೂ ಚೊಕ್ಕ ಸುದ್ದಿಗಳೇ

ಇಂದು ಜೂನ್ ಇಪ್ಪತ್ತೊಂದು
ವರುಷ ಕಳೆಯಿತೆ ಪತ್ರಿಕೆ ಬಂದು
ಕೋರುವೆ ಶುಭಾಶಯಗಳನಿಂದು
ಪ್ರಜ್ವಲಿಸಿ ಉಜ್ವಲಿಸಲಿ ವಿಜಯನಗರದಂತೆ

ಪ್ರತಿಗಾಗಿ ಕಾಯುತಿರುವೆ
ಪ್ರತೀ ಶುಭೋದಯಕೆ
ಸಣ್ಣ ಪತ್ರಿಕೆ ಯಾದರೂ
ವಿಷಯಗಳು ತುಂಬಾ ಗಂಭೀರತೆ

ಎಲ್ಲ ಅಪ್ಪ ಅಮ್ಮಂದಿರಿಗೆ
ಕಿರಿಮಗನ ಮೇಲೆ ಪ್ರೀತಿ
ಎಲ್ಲರ ಕೈಲಿ ಹಂಪಿ ಟೈಮ್ಸ್
ದಿನಪತ್ರಿಕೆ ಕಿರುಮಗುವಿನಂತೆ

ಹೇಳುವರು ಇದೊಂದು
ಸ್ಥಳೀಯ ಪತ್ರಿಕೆಯೆಂದು
ಓದುತ್ತಾ ಹೋಗಲು
ರಾಜ್ಯದೆಲ್ಲೆಡೆಯ ಸುದ್ದಿಗಳು

ಕವಿಗಳಿಗೆ ಕವಿಮನಸು ಅಂಕಣ
ಕೊನೆ ಪುಟಕೆ ನಿತ್ಯ ವಿಜ್ಞಾನ
ನಡುವಿನ ಪುಟ ಹಂಪಿ ಇತಿಹಾಸ ಜ್ಞಾನ
ಉಳಿದ ಪುಟಗಳೆಲ್ಲ ಸುದ್ದಿ ಸುಜ್ಞಾನ

ಮೂರ್ತಿ ಚಿಕ್ಕದಾದರೂ
ಕೀರ್ತಿ ದೊಡ್ಡದಂತೆ
ಪತ್ರಿಕೆ ಚಿಕ್ಕದಾದರೂ
ಚೊಕ್ಕ ಸುದ್ದಿಗಳೇ ತುಂಬಿಹುದಂತೆ

ಉಜ್ವಲಿಸಿ ಪ್ರಜ್ವಲಿಸಲಿ
ಹಂಪಿ ಟೈಮ್ಸ್ ದಿನ ಪತ್ರಿಕೆ
ಶತಕ ವರುಷಗಳ ಪೂರೈಸಲಿ
ಇದು ನಮ್ಮೆಲ್ಲರ ಶುಭ ಹಾರೈಕೆ

– **ಕೆ ಎಂ ಬಸವರಾಜ**
ನಿವೃತ್ತ ಇಂಜನಿಯರ್, ಹೊಸಪೇಟೆ

# ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನವಾಗಲಿ : ಸಿಎಂ ಸಿದ್ದರಾಮಯ್ಯ

## ಅಧಿಕಾರಿಗಳಿಗೆ ಅಭಿವೃದ್ಧಿ ಮಾಹಿತಿಗಾಗಿ ಸಿಎಂ ಪ್ರಶ್ನೆಗಳ ಸುರಿಮಳೆ



**ಹಂಪಿ ಟೈಮ್ಸ್ ಹೊಸಪೇಟೆ**

ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ಕೊಡಬೇಕು ಎಂದು ಮುಖ್ಯಮಂತಿಗಳಾದ ಸಿದ್ದರಾಮಯ್ಯ ಅವರು ಹೇಳಿದರು.

ಜಿಲ್ಲಾಡಳಿತ ಭವನದ ಆಡಿಟೋರಿಂ ಹಾಲ್‌ನಲ್ಲಿ ಜೂನ್ 21ರಂದು ವಿಜಯನಗರ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆಗಳನ್ನು ಎಂದಿಗೂ ನಿಲ್ಲಿಸುವುದಿಲ್ಲ, ನಿರಂತರ ಮುಂದುವರೆಯಲಿವೆ. ಈ ಬಗ್ಗೆ ಅಧಿಕಾರಿಗಳಲ್ಲಿ ಯಾವುದೇ ರೀತಿಯ ಗೊಂದಲ ಬೇಡ ಎಂದು ಸ್ಪಷ್ಟಪಡಿಸಿದ ಮುಖ್ಯಮಂತ್ರಿಗಳು, ಆಯಾ ಯೋಜನೆಗಳ ಅನುಷ್ಠಾನಾ ಧಿಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸಿ ಜನರಿಗೆ ಅನುಕೂಲ ಕಲ್ಪಿಸಿಕೊಡಬೇಕು ಎಂದು ಸೂಚಿಸಿದರು.

2007–08ರಲ್ಲಿ ನಡೆಸಿದ ಸಮೀಕ್ಷೆಯಲ್ಲಿ ವಿಜಯನಗರ ಜಿಲ್ಲೆಯಲ್ಲಿ 7512 ದೇವದಾಸಿ ಮಹಿಳೆಯರಿದ್ದಾರೆ ಎಂದು ಗುರುತಿಸಲಾಗಿದೆ ಎನ್ನುವ ವರದಿ ಇದೆ. ಈ ಪದ್ಧತಿ ಜಿಲ್ಲೆಯಲ್ಲಿ ಸಂಪೂರ್ಣ ತೊಲಗಬೇಕು ಎಂದು ತಿಳಿಸಿದ ಮುಖ್ಯಮಂತ್ರಿಗಳು, ಇದುವರೆಗೆ ವಸತಿ ಸೌಲಭ್ಯದಿಂದ ವಂಚಿತರಾದ 4680 ಮಾಜಿ ದೇವದಾಸಿ ಮಹಿಳೆಯರಿಗೆ ಕೂಡಲೇ ವಸತಿ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ವಹಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಿಗೆ ಸೂಚನೆ ನೀಡಿದರು. ದೇವದಾಸಿಯರಿಗೆ ವಸತಿ ಸೌಕರ್ಯ ಕಲ್ಪಿಸುವ ಸಂಬಂಧ ಅಗತ್ಯ ಕ್ರಮ ವಹಿಸಲು ಇದೆ ವೇಳೆ ವಸತಿ ಸಚಿವರಾದ ಜಮೀರ್ ಅಹಮದ್ ಖಾನ್ ಅವರಿಗೆ ತಿಳಿಸಿದರು.

ಹಾಸ್ಟೇಲ್‌ಗಳ ಸ್ಥಿತಿಗತಿಯ ಬಗ್ಗೆ ಮುಖ್ಯಮಂತ್ರಿಗಳು ಸಭೆಯಲ್ಲಿ ಪರಿಶೀಲಿಸಿದರು. ಹಾಸ್ಟೆಲ್ಗಳಿಗೆ ನಿಯಮಿತವಾಗಿ ಭೇಟಿ ನೀಡುತ್ತೀರಾ? ಅಲ್ಲಿ ಊಟ ಮಾಡಿ ಗುಣಮಟ್ಟದ ಪರಿಶೀಲಿಸಿದ್ದೀರಾ? ಹಾಸ್ಟೇಲ್ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಕಡಿಮೆಯಾಗಲು ಕಾರಣ ಏನು? ಎಂದು ಮುಖ್ಯಮಂತ್ರಿಗಳು ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಪ್ರಶ್ನಿಸಿದರು. ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಂಡು ಮಕ್ಕಳಿಗೆ ಉತ್ತಮವಾದ ಸೌಕರ್ಯ ಒದಗಿಸಲು ಮುಖ್ಯಮಂತ್ರಿಗಳು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಗ್ರಾಮಮಟ್ಟದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಉತ್ತಮವಾಗಿ ಕೆಲಸ ಮಾಡಬೇಕು. ಪ್ರತಿ ಮನೆಗೆ ಭೇಟಿ ನೀಡಿ ಕುಂದುಕೊರತೆಗಳನ್ನು ಆಲಿಸಬೇಕು. ಗ್ರಾಮದಲ್ಲಿ ಸುತ್ತಾಡದೇ, ಮನೆಗಳಿಗೆ ಭೇಟಿ ನೀಡದೇ ಗ್ರಾಮ ಸ್ವಚ್ಛವಾಗಿದೆ. ಶೌಚಮುಕ್ತ ಗ್ರಾಮ ಎಂದು ಇನ್ಮುಂದೆ ತಪ್ಪು ವರದಿ ನೀಡುವುದು ಮುರುಕಳಿಸಿದರೇ ಅಂತಹ ಪಿಡಿಓಗಳ ವಿರುದ್ಧ ನಿರ್ಧಾಕ್ಷಿಣ್ಯ ಕ್ರಮ ವಹಿಸಲಾಗುವುದು ಎಂದು ಮುಖ್ಯಮಂತ್ರಿಗಳು ಎಚ್ಚರಿಸಿದರು.

ಜಾನುವಾರು ಜೀವಹಾನಿ ಎಷ್ಟು ಪ್ರಕರಣಗಳಿಗೆ ಪರಿಹಾರ ನೀಡಿದ್ದೀರಿ ಎಂದು ಮುಖ್ಯಮಂತ್ರಿಗಳು ಪಶುಪಾಲನಾ ಇಲಾಖೆಯ ಅಧಿಕಾರಿಗಳಿಗೆ ಪ್ರಶ್ನಿಸಿದರು. 2023–24ನೇ ಸಾಲಿನಲ್ಲಿ ಆಕಸ್ಮಿಕವಾಗಿ ಮರಣ ಹೊಂದಿದ 1389 ಕುರಿ ಮೇಕೆಗಳಿಗೆ 69,30,000 ಪರಿಹಾರ ನೀಡಲಾಗಿದೆ. ಜಿಲ್ಲೆಯಲ್ಲಿನ ಒಟ್ಟು 3,38,560 ದನ ಮತ್ತು ಎಮ್ಮೆಗಳಿಗೆ ಹಾಗೂ 8,25,787 ಕುರಿ ಮೇಕೆಗಳಿಗೆ ಸದ್ಯ ಜಿಲ್ಲೆಯಲ್ಲಿ 1,89,024 ಮೆಟ್ರಿಕ್ ಟನ್ ಮೇವು ಲಭ್ಯವಿದೆ ಎಂದು ಪಶುಪಾಲನಾ ಇಲಾಖೆಯ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ದನ, ಎಮ್ಮೆ, ಎತ್ತು, ಕುರಿ, ಮೇಕೆಗಳು ಮೃತಪಟ್ಟಲ್ಲಿ ತಕ್ಷಣ ಪರಿಹಾರ ನೀಡಲು ಕ್ರಮ ವಹಿಸಬೇಕು ಎಂದು ಇದೆ ವೇಳೆ ಮುಖ್ಯಮಂತ್ರಿಗಳು ನಿರ್ದೇಶನ ನೀಡಿದರು.

ಸಹಾಯಕ ಆಯುಕ್ತರಿಗೆ ಸೂಚನೆ: ಸಹಾಯಕ ಆಯುಕ್ತರು ಇನ್ಮುಂದೆ ನಿಯಮಿತವಾಗಿ ಎಲ್ಲ ತಹಸೀಲ್ದಾರ ಕಚೇರಿಗಳಿಗೆ ಭೇಟಿ ನೀಡಬೇಕು. ಸರ್ವೆ ಅರ್ಜಿ, ಮೂಟೇಶನ್, ಖಾತಾ ಬದಲಾವಣೆ ಸೇರಿದಂತೆ ನಾನಾ ವಿಷಯಗಳ ಬಗ್ಗೆ ಪರಿಶೀಲಿಸಿ ಆ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಿ ಕೆಲಸದಲ್ಲಿ ವೇಗ ಹೆಚ್ಚಿಸಬೇಕು ಎಂದು ಮುಖ್ಯಮಂತ್ರಿಗಳು ಸಹಾಯಕ ಆಯುಕ್ತರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

# ಭಾರತ ಸೇವಾದಳದ ವಿಜಯನಗರ ಜಿಲ್ಲಾಧ್ಯಕ್ಷರಾಗಿ ಸಾಲಿಸಿದ್ದಯ್ಯಸ್ವಾಮಿ ನೇಮಕ



**ಹಂಪಿ ಟೈಮ್ಸ್ ಹೊಸಪೇಟೆ**

ಭಾರತ ಸೇವಾದಾಳ ವಿಜಯನಗರ ಜಿಲ್ಲಾ ಅಡಕ ಸಮಿತಿಗೆ ಬಳ್ಳಾರಿ ಜಿಲ್ಲಾಧ್ಯಕ್ಷ ಸೂರ್ಯನಾರಾಯಣ ರೆಡ್ಡಿ ನೇತೃತ್ವದಲ್ಲಿ ನಗರದ ಶ್ರೀ ಕೊಟ್ಟೂರುಸ್ವಾಮಿ ಮಠದಲ್ಲಿ ಗುರುವಾರ ನೂತನ ಪದಾಧಿಕಾರಿಗಳ ನೇಮಕ ಮಾಡಲಾಯಿತು.

ವಿಜಯನಗರ ಜಿಲ್ಲಾಧ್ಯಕ್ಷರಾಗಿ ಸಾಲಿಸಿದ್ದಯ್ಯಸ್ವಾಮಿ, ಉಪಾಧ್ಯಕ್ಷರಾಗಿ ಬ್ಯಾಳಿ ವಿಜಯ ಕುಮಾರಗೌಡ, ಕಾರ್ಯದರ್ಶಿ ಐಗೋಳು ಚಿದಾನಂದ, ಕೋಶಾಧ್ಯಕ್ಷರಗಿ ಪತ್ರಿ ಹಿರೇಮಠ, ರಾಜ್ಯ ಸದಸ್ಯರಾಗಿ ಚನ್ನವೀರಸ್ವಾಮಿ ನೂತನ ಪದಾಧಿಕಾರಿಗಳಾಗಿ ಆಯ್ಕೆಯಾಗಿದ್ದಾರೆ.

ಸೇವಾದಳದ ಪಾಂಡುರಂಗ ನಿಕ್ಕಮ್, ಬಾರಿಕಾರ್ ಗಣೇಶ, ಟಿ.ಜಿ.ವಿಠಲ, ಮಲ್ಲಿಕಾರ್ಜುನ ಗೌಡ್ರು, ಎಂ.ಪಿ.ಎಂ.ಮಂಜುನಾಥ, ಪ್ರಕಾಶ ಕಾಟಾಪುರ್ ಇತರರು ಇದ್ದರು.

# ಡಾ. ಕೆ ರವೀಂದ್ರನಾಥ ಅವರಿಗೆ ಶ್ರೀ ಬಿ.ಎಸ್.ಸಣ್ಣಯ್ಯ ಪ್ರಶಸ್ತಿ

**ಹಂಪಿ ಟೈಮ್ಸ್ ಹೊಸಪೇಟೆ**

ಹಸ್ತಪ್ರತಿ ತಜ್ಞರು ಹಾಗೂ ಕನ್ನಡ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕರಾದ ಡಾ. ಕೆ. ರವೀಂದ್ರನಾಥ ಅವರು 2024ನೇ ಸಾಲಿನ ಶ್ರೀ ಬಿ.ಎಸ್. ಸಣ್ಣಯ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.



ಕನ್ನಡ ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥಸಂಪಾದನಾ ಕ್ಷೇತ್ರದಲ್ಲಿ ಹೆಸರಾಗಿರುವ ಶ್ರೀ ಬಿ. ಎಸ್. ಸಣ್ಣಯ್ಯ ಅವರ ನೆನಪಿಗಾಗಿ ಮೊದಲ ಬಾರಿಗೆ ಬಿ. ಎಸ್.ಸಣ್ಣಯ್ಯ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಚೊಚ್ಚಲ ಪ್ರಶಸ್ತಿಯನ್ನು ನಾಡಿನ ಹಸ್ತಪ್ರತಿಶಾಸ್ತ್ರ ಗ್ರಂಥಸಂಪಾದನೆ ಕ್ಷೇತ್ರದಲ್ಲಿ ಕಳೆದ 30 ವರ್ಷಗಳಿಂದ ಹಸ್ತಪ್ರತಿ ಕ್ಷೇತ್ರದಲ್ಲಿ ಸೇವೆಸಲ್ಲಿಸಿದ ಖ್ಯಾತ ತಜ್ಞರಾದ ಡಾ. ಕೆ. ರವೀಂದ್ರನಾಥ ಅವರಿಗೆ ಬಿ. ಎಸ್. ಸಣ್ಣಯ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲು ಶ್ರೀ ಬಿ.ಎಸ್. ಸಣ್ಣಯ್ಯ ಟ್ರಸ್ಟ್ ಸದಸ್ಯ ರಾಮೇಗೌಡ ತಿಳಿಸಿದ್ದಾರೆ.

ಡಾ. ಕೆ. ರವೀಂದ್ರನಾಥ ಅವರು ಹಸ್ತಪ್ರತಿ ಕನ್ನಡಿಗರ ಬದುಕು, ಕನ್ನಡ ದಾಖಲು ಸಾಹಿತ್ಯ, ಬಿ.ಎಸ್.ಸಣ್ಣಯ್ಯ ಜೀವನ ಮತ್ತು ಸಾಧನೆ, ಅಧ್ಯಯನದ ವಿಧಿ–ವಿಧಾನಗಳು ಮುಂತಾದ ಸಂಶೋಧನೆ ಮತ್ತು ಗ್ರಂಥಸಂಪಾದನೆಗೆ ಸಂಬಂಧಿಸಿದಂತೆ 70ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಜುಲೈ 7ರಂದು ಮೈಸೂರಿನಲ್ಲಿ ನಡೆಯಲಿರುವ ಕಾರ್ಯ ಕ್ರಮದಲ್ಲಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು ಎಂದು ದತ್ತಿನಿಧಿ ಸಂಸ್ಥಾಪಕ ಬಿ.ಎಸ್. ರವಿ ತಿಳಿಸಿದ್ದಾರೆ. ಮೊದಲ ಬಾರಿಗೆ ಶ್ರೀ ಬಿ.ಎಸ್. ಸಣ್ಣಯ್ಯ ಪ್ರಶಸ್ತಿಗೆ ಭಾಜನರಾದ ಡಾ. ರವೀಂದ್ರನಾಥ ಅವರಿಗೆ ಕನ್ನಡ ವಿವಿ ಕುಲಪತಿ ಡಾ.ಡಿ.ವಿ.ಪರಮಶಿಮೂರ್ತಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಯೋಗದಿಂದ ರೋಗ ನಿವಾರಣೆ

## ಫ್ರೀಡಂ ಪಾರ್ಕ್ ನಲ್ಲಿ ಜಿಲ್ಲಾ ಮಟ್ಟದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಡಿಸಿ ದಿವಾಕರ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**

ಒತ್ತಡದ ಜೀವನದಲ್ಲಿ ಇಂದು ನಾವು ಮಾನಸಿಕ ಸ್ಥಿಮಿತ ಕಳೆದುಕೊಳ್ಳುತ್ತಿದ್ದೇವೆ. ಪ್ರತಿ ಮನೆಯಲ್ಲೂ ಅರೆಹುಚ್ಚರು ಇರುವ ಆತಂಕ ಇದ್ದೇ ಇದೆ. ಯೋಗದಿಂದ ಮಾತ್ರ ಮಾನಸಿಕ ಒತ್ತಡ ನಿವಾರಿಸಲು ಸಾಧ್ಯ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ಆಯುಷ್ ಇಲಾಖೆ, ಜಿಲ್ಲಾಡಳಿತ ವಿಜಯನಗರ ಹಾಗೂ ಪತಂಜಲಿ ಯೋಗ ಸಮಿತಿ ಪ್ರಜಾಪತಿ ಬ್ರಹ್ಮ ಕುಮಾರಿ ವಿಶ್ವವಿದ್ಯಾಲಯ ಸೇರಿದಂತೆ ಸಹಿತ ವಿವಿಧ ಇಲಾಖೆಗಳ ವತಿಯಿಂದ ಶುಕ್ರವಾರ ಬೆಳಿಗ್ಗೆ ಎಸ್.ಕೆ.ಎಂ.ಇ.ಪಿ.ಎಲ್ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಜಿಲ್ಲಾ ಮಟ್ಟದ 10ನೇ ಅಂತರರಾಷ್ಟ್ರೀಯ ಯೋಗ ದಿನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹಿಂದೆ ದಕ್ಷಿಣ ಭಾರತಕ್ಕೆ ಒಂದೇ ಒಂದು ಮಾನಸಿಕ ಆರೋಗ್ಯ ಕೇಂದ್ರ ಇತ್ತು, ಬಳಿಕ ರಾಜ್ಯಕ್ಕೆ ಒಂದು ಮಾನಸಿಕ ಕೇಂದ್ರ ಬಂತು. ಇಂದು ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾನಸಿಕ ಕಾಯಿಲೆಗೆ ಗುಳಿಗೆ ಕೊಡಲಾಗುತ್ತಿದೆ. ಇದು ಮಾನಸಿಕ ಕಾಯಿಲೆ ಹೆಚ್ಚಿದ್ದರ ಸೂಚನೆ ಎಂದರು. ದೈಹಿಕ ಕಾಯಿಲೆಗಳಿಗಿಂತಲೂ ಮಾನಸಿಕ ಕಾಯಿಲೆ ಬಹಳ ಅಪಾಯಕಾರಿ. ಅದು ಸಮಾಜಕ್ಕೇ ಕೇಡು ಉಂಟುಮಾಡುವಂತದ್ದು. ಒತ್ತಡದಿಂದ ಬರುವ ನಮ್ಮ ಮಾನಸಿಕ ಕಾಯಿಲೆಯನ್ನು ಯೋಗ, ಪ್ರಾಣಾಯಾಮಗಳಿಂದ ದೂರ ಮಾಡಬಹುದು ಎಂದರು. ಯೋಗ ದಿನಚರಿಯ ಒಂದು ಭಾಗವಾಗಬೇಕು ಎಂದ ಜಿಲ್ಲಾಧಿಕಾರಿ, ವಿದ್ಯಾರ್ಥಿಗಳು, ಯುವಜನತೆ ಇದರತ್ತ ಇನ್ನಷ್ಟು ಆಕರ್ಷಿತರಾದರೆ ಉತ್ತಮ ಎಂದರು.

ಜಿಲ್ಲಾ ಪಂಚಾಯಿತಿ ಸಿಇಒ ಸದಾಶಿವ ಪ್ರಭು ಬಿ. ಮಾತನಾಡಿ, ಒತ್ತಡ ನಿರ್ವಹಿಸಲು ಯೋಗ ಪರಿಣಾಮಕಾರಿ ಎಂಬುದು ಈಗಾಗಲೇ ಸಾಬೀತಾಗಿದೆ, ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಆಯುಷ್ ಇಲಾಖೆಯ ಡಾ.ಮುನಿವಾಸುದೇವ ರೆಡ್ಡಿ, ಡಾ.ಗುರುಬಸವರಾಜ್, ಪತಂಜಲಿ ಯೋಗ ಸಮಿತಿಯ ದಕ್ಷಿಣ ಭಾರತದ ವರಿಷ್ಠರು ಹಾಗೂ ರಾಜ್ಯ ಪ್ರಭಾರಿ ಭವರಲಾಲ್ ಆರ್ಯ, ಪ್ರಜಾಪಿತ ಬ್ರಹ್ಮಕುನಾರಿ ಈಶ್ವರೀಯ ವಿಶ್ವವಿದ್ಯಾಲಯದ ಮಾನಸ ಇತರರು ಪಾಲ್ಗೊಂಡಿದ್ದರು. ಬಳಿಕ ನಡೆದ ಸಾಮೂಹಿಕ ಯೋಗ ಶಿಬಿರಕ್ಕೆ ಭವರಲಾಲ್ ಆರ್ಯ ಮಾರ್ಗದರ್ಶನ ನೀಡಿದರು. ಯುವ ಭಾರತ ರಾಜ್ಯ ಪ್ರಭಾರಿ ಕಿರಣ್ ಕುಮಾರ್, ಯೋಗ ಸಾಧಕ ಬಾಲಚಂದ್ರ ಶರ್ಮಾ, ಛೇಂಬರ ಆಪ್ ಕಾಮರ್ಸ್ ಅಧ್ಯಕ್ಷ ಅಶ್ವಿನ ಕೊತಂಬರಿ, ಡಾ.ಎಫ್.ಟಿ.ಹಳ್ಳಿಕೇರಿ, ಅನಂತ ಜೋಶಿ, ಶ್ರೀರಾಮ ವಿಠೋಬಣ್ಣ, ಶ್ರೀಧರ, ಅಶೀಕ ಚಿತ್ರಗಾರ, ಯೋಗಸಾಧಕರು, ಆಯುಷ ಇಲಾಖೆಯ ಅಧಿಕಾರಿಗಳು, ಯೋಗಾಸಕತ್ತರು ಪಾಲ್ಗೊಂಡಿದ್ದರು.

ಯುವ, ವಿದ್ಯಾರ್ಥಿಗಳ ಉತ್ಸಾಹ: ಸಾಮೂಹಿಕ ಯೋಗ ಶಿಬಿರದಲ್ಲಿ 600ಕ್ಕೂ ಅಧಿಕ ಮಂದಿ ಪಾಲ್ಗೊಂಡಿದ್ದರು. ಹಲವಾರು ಶಾಲೆಗಳ ವಿದ್ಯಾರ್ಥಿಗಳು, ಕಾಲೇಜು ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡರು. ಯೋಗ ಶಿಬಿರದ ಬಳಿಕ ಎಲ್ಲರಿಗೂ ಪ್ರಮಾಣಪತ್ರ ನೀಡಲಾಯಿತು. ಯೋಗ ಶಿಕ್ಷಕರೂ ಆಗಿರುವ ಆಕಾಶವಾಣಿ ಕೇಂದ್ರದ ಉದ್ಘೋಷಕಿ ನಾಗರತ್ನ ಕಾರ್ಯಕ್ರಮ ನಿರೂಪಿಸಿದರು.



# ಬಳ್ಳಾರಿ ಜಿಲ್ಲಾ ಉಸ್ತುವಾರಿ ಹೊಣೆ ಜಮೀರ್ ಅಹಮದ್ ಹೆಗಲಿಗೆ

**ಹಂಪಿ ಟೈಮ್ಸ್ ಹೊಸಪೇಟೆ**



ಬಳ್ಳಾರಿ ಜಿಲ್ಲಾ ಉಸ್ತುವಾರಿ ಹೊಣೆ ಗಾರಿಕೆ ವಹಿಸಿಕೊಳ್ಳುವಂತೆ ಜಮೀರ್ ಅಹಮದ್ ಖಾನ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ವಿಜಯನಗರ ಜಿಲ್ಲಾ ಕೆಡಿಪಿ ಸಭೆಯಲ್ಲಿ ಪಾಲ್ಗೊಂಡ ನಂತರ ಸುದ್ಧಿಗಾರರ ಜತೆ ಮಾತನಾಡಿ, ವಿಜಯನಗರದ ಜತೆ ಬಳ್ಳಾರಿ ಜಿಲ್ಲಾ ಉಸ್ತುವಾರಿ ಹೊಣೆ ಗಾರಿಕೆ ಜಮೀರ್ ಅಹಮದ್ ಖಾನ್ ಅವರಿಗೆ ನೀಡಲಾಗುವುದು ಎಂದು ಹೇಳಿದರು.

ಈ ಕುರಿತು ಅಧಿಕೃತ ಆದೇಶ ನಾಳೆ ಹೊರಡಿಸಲಾಗುವುದು. ತಕ್ಷಣ ದಿಂದಲೇ ಹೊಣೆಗಾರಿಕೆ ತೆಗೆದುಕೊಳ್ಳುವಂತೆ ಜಮೀರ್ ಅಹಮದ್ ಖಾನ್ ಅವರಿಗೂ ನಿರ್ದೇಶನ ನೀಡಿದರು. ನಾಗೇಂದ್ರ ರಾಜೀನಾಮೆಯಿಂದ ಬಳ್ಳಾರಿ ಜಿಲ್ಲಾ ಉಸ್ತುವಾರಿ ತೆರವಾಗಿತ್ತು.

# ಚೆಲ್ಲಾಟವಾಡಿದ್ರೆ ಹುಷಾರ್

**ಮೊದಲ ಪುಟದಿಂದ**

ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. 2023–24ನೇ ಸಾಲಿನಲ್ಲಿ ವರದಿಯಾದ ಒಟ್ಟು 34 ರೈತ ಆತ್ಮಹತ್ಯೆ ಪ್ರಕರಣಗಳ ಪೈಕಿ 8 ತಿರಸ್ಕೃತವಾಗಿವೆ. 20ಕ್ಕೆ ಪರಿಹಾರ ನೀಡಲಾಗಿದೆ. ಪರಿಹಾರ ಧನ ವಿತರಣೆಗಾಗಿ ಡಿಬಿಟಿ ತಂತ್ರಾಂಶದಲ್ಲಿ ನಮೂದಿಸಿ ಪರಿಹಾರ ಪಾವತಿಯಾಗದೇ 6 ಬಾಕಿ ಇವೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಆದ್ಯತೆಯ ಮೇಲೆ ಪರಿಹಾರಕ್ಕೆ ಕ್ರಮ ವಹಿಸಬೇಕು. ರೈತರ ಸಾವಿಗೆ ಕಾರಣ ಏನು ಎಂಬುದನ್ನು ಪತ್ತೆ ಹಚ್ಚಬೇಕು. ಒಣ ಭೂಮಿ ಇರುವ ಕಡೆಗೆ ಕೃಷಿ ಹೊಂಡ ಜಾಸ್ತಿ ಮಾಡಿಸವೇಕು ಎಂದು ಮುಖ್ಯಮಂತ್ರಿಗಳು ಇದೆ ವೇಳೆ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರಾದ ಬಸವರಾಜ ರಾಯರೆಡ್ಡಿ, ಜಿಲ್ಲಾ ಉಸ್ತುವಾರಿ ಸಚಿವರಾದ ಬಿ ಜೆಡ್ ಜಮೀರ್ ಅಹ್ಮದ್ ಖಾನ್, ವಿವಿಧ ವಿಧಾನಸಭಾ ಮತಕ್ಷೇತ್ರಗಳ ಶಾಸಕರು ಮತ್ತು ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ., ಸಹಾಯಕ ಆಯುಕ್ತರಾದ ಮೊಹಮ್ಮದ್ ಅಲಿ ಅಕ್ರಮ ಷಾಹ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲೀಂ ಪಾಶಾ, ಜಿಪಂ ಮುಖ್ಯ ಯೋಜನಾಧಿಕಾರಿ ಅನ್ನದಾನಸ್ವಾಮಿ ಜೆ.ಎಂ., ತಹಸೀಲ್ದಾರರು, ತಾಪಂ ಇಓಗಳು ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
E-Paper
Now HAMPI TIMES E-Paper has been reached
70000
PlUS Readers
Place Your Ads here
Reach New Audience
www.hampitimes.com
epaper.hampitimes.com
hampitimes@gmail.com
@hampitimes
Contact for News, Events & Advertisements
94486 33038

# 250 ಹಾಸಿಗೆ ಆಸ್ಪತ್ರೆ 400 ಹಾಸಿಗೆಗೆ ಮೇಲ್ದರ್ಜೆಗೇರಿಸಲು ಸಿಎಂ ಒಪ್ಪಿಗೆ

**ಹಂಪಿ ಟೈಮ್ಸ್ ಹೊಸಪೇಟೆ**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಜಯನಗರ ಜಿಲ್ಲಾ ಸ್ಪತ್ರೆ 250 ಹಾಸಿಗೆ ಯಿಂದ 400 ಹಾಸಿಗೆಗೆ ಮೇಲ್ದರ್ಜೆ ಗೇರಿಸಲು ಒಪ್ಪಿಗೆ ನೀಡಿದ್ದಾರೆ.

ಕೆಡಿಪಿ ಸಭೆಯಲ್ಲಿ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್, ಈ ಕುರಿತು ಪ್ರಸ್ತಾಪಿಸಿ ಜಿಲ್ಲೆಗೆ ಮೆಡಿಕಲ್ ಕಾಲೇಜು ಅಗತ್ಯ ವಿದ್ದು ಅದಕ್ಕೆ ಪೂರಕವಾಗಿ 250 ಹಾಸಿಗೆ ಆಸ್ಪತ್ರೆ 400 ಹಾಸಿಗೆಗೆ ಮೇಲ್ದರ್ಜೆ ಗೆ ಏರಿಸಬೇಕು. ಇದಕ್ಕಾಗಿ 75 ಕೋಟಿ ರೂ. ವಿಶೇಷ ಅನುದಾನ ಒದಗಿಸಬೇಕು ಎಂದು ಮನವಿ ಮಾಡಿದರು. ಅದಕ್ಕೆ ಸ್ಪಂದಿಸಿದ ಮುಖ್ಯಮಂತ್ರಿ ಯವರು ಈ



ಕುರಿತು ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.

ಹಂಪಿ ವಿಶ್ವ ವಿದ್ಯಾಲಯ ಕ್ಕೆ ಹತ್ತು ಕೋಟಿ ರೂ. ವಿಶೇಷ ಅನುದಾನ, ಜಿಲ್ಲೆಯ ಅಭಿವೃದ್ಧಿ ಗೆ ವಿಶೇಷ ಪ್ಯಾಕೇಜ್ ಸೇರಿ ಜಿಲ್ಲೆಯ ಬೇಡಿಕೆ ಗಳ ಬಗ್ಗೆ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ನೇತೃತ್ವದಲ್ಲಿ ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಸಂಸದೆ ಪ್ರಭಾ ಮಲ್ಲಿಕಾರ್ಜುನ, ಶಾಸಕರಾದ ಗವಿಯಪ್ಪ, ನೇಮಿರಾಜ್ ನಾಯ್ಕ್, ಶ್ರೀನಿವಾಸ್, ಕೃಷ್ಣಾ ನಾಯಕ್, ಲತಾ ಮಲ್ಲಿಕಾರ್ಜುನ ಉಪಸ್ಥಿತರಿದ್ದರು.

ಹಂಪಿ ಟೈಮ್ಸ್
HAMPI TIMES

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ಕ್ರೋಧಿ

**22–06–2024 – ಶನಿವಾರ**

| | |
|---|---|
| ತಿಥಿ | : ಹುಣ್ಣಿಮೆ/ಪ್ರಥಮ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮೂಲ |
| ಯೋಗ | : ಶುಕ್ಲ |
| ಕರಣ | : ಭವ |
| ಸೂರ್ಯೋದಯ | : 05:43:33 |
| ಸೂರ್ಯಾಸ್ತ | : 19:14:34 |
| ರಾಹು | : 09:06–10:48 |
| ಯಮಘಂಡ | : 14:10–15:52 |
| ಗುಳಿಕ | : 05:44–07:25 |

## ತುಂಗಭದ್ರಾ ನೀರಿನ ಮಟ್ಟ



**ಶುಕ್ರವಾರ : 21–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1582.32 ಅಡಿ |
| ಒಳ ಹರಿವು | 780 ಕ್ಯುಸೆಕ್ |
| ಹೊರ ಹರಿವು | 1802 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.699 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1579.52 ಅಡಿ |
| ಒಳ ಹರಿವು | 367 ಕ್ಯುಸೆಕ್ |
| ಹೊರ ಹರಿವು | 1577 ಕ್ಯುಸೆಕ್ |
| ಸಾಮರ್ಥ್ಯ | 4.242 ಟಿಎಂಸಿ |

# ಲವಲವಿಕೆಗಾಗಿ ಯೋಗ ಮಾಡಿ

## 10ನೇ ಅಂತರಾಷ್ಟ್ರೀಯಯೋಗ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಯೋಗಾಭ್ಯಾಸ, ಚಿತ್ರನಟಿ ಶ್ರೀಲೀಲಾ ಭಾಗಿ




**■ ಹಂಪಿ ಟೈಮ್ಸ್ ಬಳ್ಳಾರಿ**
ಮುಖ್ಯಮಂತ್ರಿ ಸಿದ್ದರಾಮಯ್ಯ ಯೋಗಾಭ್ಯಾಸ ಮಾಡುವ ಮೂಲಕ, ಅಂತರಾಷ್ಟ್ರೀಯಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾಆಯುಷ್ ಇಲಾಖೆ ಸಹಯೋಗದಲ್ಲಿ ಶುಕ್ರವಾರದಂದು ಬೆಳ್ಳಂ ಬೆಳಿಗ್ಗೆ ಸಂಡೂರು ತಾಲ್ಲೂಕು ತೋರಣಗಲ್ಲಿನ ಜೆಎಸ್‌ಡಬ್ಲ್ಯು ಟೌನ್‌ಶಿಪ್ ವಿದ್ಯಾನಗರದಲ್ಲಿ ಏರ್ಪಡಿಸಲಾದ ಅಂತರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಲವಲವಿಕೆಯಿಂದ ಕೆಲವು ಯೋಗಾಸನಗಳ ಅಭ್ಯಾಸ ಮಾಡಿದರು.

ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿಗಳು, ಮುಖ್ಯಮಂತ್ರಿ, ಗಣ್ಯಾತಿಗಣ್ಯರು ಸೇರಿದಂತೆ ಮಕ್ಕಳು, ಸಾರ್ವ ಜನಿಕರು ಹಾಗೂ ಪಾಲ್ಗೊಂಡಿದ್ದ ಜನಸ್ತೋಮಕ್ಕೆ ಯೋಗದ ವಿವಿಧ ಆಸನಗಳ ಅಭ್ಯಾಸ ಮಾಡಿಸಿದರು. ಪ್ರತಿನಿತ್ಯ ಯೋಗಾಭ್ಯಾಸ ಮಾಡುವುದರಿಂದ ಜನರ ಆರೋಗ್ಯ ಉತ್ತಮವಾಗಿರುವುದರ ಜೊತೆಗೆ, ಇಡೀ ದಿನ ವ್ಯಕ್ತಿ ಲವಲವಿಕೆಯಿಂದ ಇರಲು ಸಹಕಾರಿಯಾಗಿದೆ. ಹೀಗಾಗಿ ಎಲ್ಲರೂ ನಿತ್ಯಯೋಗಾಭ್ಯಾಸ ಮಾಡಬೇಕು ಎಂದು ಮನವಿ ಮಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಯೋಗಾಭ್ಯಾಸದಲ್ಲಿ ಆಸಕ್ತಿಯಿಂದಲೇ ಪಾಲ್ಗೊಂಡು, ವಿವಿಧ ಆಸನಗಳನ್ನು ಅಭ್ಯಾಸ ಮಾಡಿದರು. ಅಂತರಾಷ್ಟ್ರೀಯಯೋಗ ದಿನಾಚರಣೆಯಲ್ಲಿ ಭಾಗವಹಿಸಿದ್ದ ಖ್ಯಾತ ಚಲನಚಿತ್ರ ನಟಿ ಶ್ರೀಲೀಲಾ ಎಲ್ಲರ ಆಕರ್ಷಣೆಯ ಕೇಂದ್ರ ಬಿಂದುವಾದರು. ನಟಿ ಶ್ರೀಲೀಲಾ ಕೂಡ ಖುಷಿಯಿಂದಲೇ ಯೋಗಾಭ್ಯಾಸದಲ್ಲಿ ಪಾಲ್ಗೊಂಡು ಮಿಂಚಿದರು. ಸಮಾರಂಭದಲ್ಲಿ ನೆರೆದಿದ್ದ ಮಕ್ಕಳಾದಿಯಾಗಿ ಸಾರ್ವಜನಿಕರುಕೂಡ ನಟಿ ಶ್ರೀಲೀಲಾ ಅವರಿಗೆ ಚಪ್ಪಾಳೆಯ ಸುರಿಮಳೆಗೈದರು. ಸಂತೋಷದಿಂದ ಪ್ರತಿಕ್ರಿಯಿಸಿದ ಶ್ರೀಲೀಲಾ ಅವರು, ಬಳ್ಳಾರಿ ಜಿಲ್ಲೆಯ ತೋರಣ ಗಲ್‌ನಲ್ಲಿ ನಡೆಸಲಾಗು ತ್ತಿರುವ ಅಂತರಾಷ್ಟ್ರೀಯ ಯೋಗ ದಿನಾಚರಣೆ ಸಂದರ್ಭ ದಲ್ಲಿ ತಮ್ಮೆಲ್ಲರನ್ನು ಈ ರೀತಿಯಾಗಿ ಭೇಟಿ ಯಾಗಿದ್ದು ತುಂಬಾ ಸಂತಸ ತಂದಿದೆ. ಜನರು ನನ್ನ ಮೇಲೆ ತೋರಿಸುತ್ತಿ ರುವ ಪ್ರೀತಿಗೆ ನಾನು ಚಿರಋಣಿ ಯಾಗಿದ್ದೇನೆ. ನಿತ್ಯ ಯೋಗಾಭ್ಯಾಸದಿಂದ ಆರೋಗ್ಯ ಚೆನ್ನಾಗಿರುತ್ತದೆ. ಎಲ್ಲರೂ ನಿತ್ಯಯೋಗಾಭ್ಯಾಸ ಮಾಡಬೇಕು ಎಂದು ಕರೆ ನೀಡಿದರು. ಮಕ್ಕಳು, ಜನರು ನಟಿಯೊಂದಿಗೆ ಸೆಲ್ಫಿ ಪಡೆಯಲು ಮುಗಿಬಿದ್ದಿದ್ದು ಕಂಡು ಬಂದಿತು.



ಬಳ್ಳಾರಿ ಜಿಲ್ಲೆಯ ಕಲಾವಿದ ಮಂಜುನಾಥ ಗೋವಿಂದವಾಡ ಅವರು ರಚಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಚಿತ್ರಕಲಾಕೃತಿಯನ್ನುಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಕಲಾವಿದರ ಕೈನಿಂದಲೇ ಹಸ್ತಾಂತರಿಸಲಾಯಿತು. 12 ನೇ ಶತಮಾನದ ಕವಿಯತ್ರಿ ಅಕ್ಕಮಹಾದೇವಿ ಅವರ ಬೃಹತ್ ಚಿತ್ರಕಲಾಕೃತಿಯನ್ನು ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನಾವರಣಗೊಳಿಸಿದರು.

ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಮಕ್ಕಳು, ಸಾರ್ವಜನಿಕರು ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡು ಯೋಗಾಭ್ಯಾಸ ನಡೆಸಿ ಸಂಭ್ರಮಿಸಿದರು. ಅಂತರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಕಾರ್ಮಿಕ ಸಚಿವ ಸಂತೋಷ್ ಎಸ್ ಲಾಡ್, ಸಂಸದ ಈ. ತುಕಾರಾಂ, ಕೆ. ಎಂ.ಎಫ್.ಅಧ್ಯಕ್ಷ ಭೀಮಾ ನಾಯಕ್, ವಿಧಾನಪರಿಷತ್ ಸದಸ್ಯ ಗೋವಿಂದರಾಜ್, ಡಾ. ಬಾಬು ಜಗಜೀವನರಾಂ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ್, ವಡ್ಡುಗ್ರಾಮ ಪಂಚಾಯತ್ ಅಧ್ಯಕ್ಷೆ ನಿಂಗಮ್ಮ ನಾಗರಾಜ್, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿ.ಪಂ. ಸಿಇಒ ರಾಹುಲ್ ಶರಣಪ್ಪ ಸಂಕನೂರ, ಎಸ್‌ಪಿ ರಂಜಿತ್‌ಕುಮಾರ್ ಬಂಡಾರು, ಉಪವಿಭಾಗಾಧಿಕಾರಿ ಎನ್. ಹೇಮಂತ್, ಗಣ್ಯರಾದ ವಿನಯ್‌ಗುರೂಜಿ ಸೇರಿದಂತೆ ಇತರರಿದ್ದರು.

# ಅಂತರಾಳದ ತತ್ವ ಅನುಸರಿಸಿ

## ಸಂಪಾದಕ ಬಸವರಾಜ ಸ್ವಾಮಿ ಹೇಳಿಕೆ । ಕನ್ನಡ ವಿವಿಯಲ್ಲಿ ವ್ಯಕ್ತಿತ್ವ ವಿಕಸನ ಉಪನ್ಯಾಸ

**■ ಹಂಪಿ ಟೈಮ್ಸ್ ಹೊಸಪೇಟೆ**
ತತ್ವದ ಮೇಲೆ ಜೀವನ ಅಡಗಿದೆ. ಪ್ರತಿಯೊಬ್ಬರಲ್ಲಿ ತತ್ವ ಎಂಬುದು ಅಂತರಾಳದಲ್ಲಿ ಅಡಗಿದ್ದು, ಜೀವನದಲ್ಲಿ ಅದನ್ನು ಸರಿಯಾಗಿ ಅಳವಡಿಸಿ ಕೊಂಡು ಜೀವನ ನಡೆಸಬೇಕೆಂದು ಸುದ್ದಿಮೂಲ ಪತ್ರಿಕೆಯ ಸಂಪಾದಕರಾದ ಬಸವರಾಜ ಸ್ವಾಮಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.




ಕನ್ನಡ ವಿಶ್ವವಿದ್ಯಾಲಯದ 21ನೇ ಜೂನ್ 2024ರಂದು ಮಂಟಪ ಸಭಾಂಗಣದಲ್ಲಿ ರಾಷ್ಟ್ರೀಯ ಸ್ವಯಂ ಸೇವಾ ಯೋಜನಾ ಘಟಕದಿಂದ ಆಯೋಜಿಸಿದ ವ್ಯಕ್ತಿತ್ವ ವಿಕಸನ ಮತ್ತು ವಚನ ಸಾಹಿತ್ಯ ಎಂಬ ವಿಶೇಷ ಉಪನ್ಯಾಸ ಕುರಿತು ಮಾತನಾಡುತ್ತಾ, ಯಾವುದೇ ಧಾರ್ಮಿಕ ಗ್ರಂಥಗಳು ಮನುಷ್ಯನ ಸೃಷ್ಟಿಯಿಂದಾಗಿವೆಯೇ ಹೊರತು ಅವುಗಳಿಂದ ಮನುಷ್ಯನಲ್ಲ. ಗ್ರಂಥಗಳು ಪಾಂಡಿತ್ಯವನ್ನು ನೀಡಿದರೆ, ಅದರ ಅನುಭವವನ್ನು ನಾವು ಸ್ವತಃ ಗಳಿಸಬೇಕು. ದೇಹ ಮತ್ತು ಮನಸ್ಸು ಒಂದುಗೂಡಿ ತತ್ವಗಳನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನವನ್ನು ಮಾಡಬೇಕು ಎಂದರು.

ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಕೆ. ರವೀಂದ್ರನಾಥ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತಾನಾಡುತ್ತಾ, ಅರಿವನ್ನು ಮೂಡಿಸುವಲ್ಲಿ ವಚನ ಸಾಹಿತ್ಯ ಪ್ರಮುಖ ಪಾತ್ರವನ್ನು ವಹಿಸುತ್ತದೆ. ವಚನ ಸಾಹಿತ್ಯದಲ್ಲಿ ಅಡಗಿರುವ ತತ್ವಗಳ ಪಾಲನೆ ಮಾಡುವುದರ ಮೂಲಕ ವ್ಯಕ್ತಿತ್ವವನ್ನು ವಿಕಸಗೊಳಿಕೊಳ್ಳಬೇಕು. ವಚನ ಸಾಹಿತ್ಯವನ್ನು ಕ್ರಿಯೆ ಮತ್ತು ಪರಿಪೂರ್ಣತೆಯೊಂದಿಗೆ ಅಭ್ಯಸಿಸಿದಾಗ ವ್ಯಕ್ತಿತ್ವ ವಿಕಸನವಾಗುವುದು ಎಂದು ಹೇಳಿದರು.

ಅಧ್ಯಯನಾಂಗದ ನಿರ್ದೇಶಕರಾದ ಡಾ. ಅಮರೇಶ್ ಯತಗಲ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಅಧ್ಯಾಪಕರಾದ ಪದ್ಮಾವತಿ ಕೆ. ನಿರೂಪಿಸಿದರು. ಕಾರ್ಯಕ್ರಮವನ್ನು ಎನ್.ಎಸ್.ಎಸ್. ಘಟಕದ ಸಂಯೋಜಕರಾದ ಡಾ.ಎ. ಶ್ರೀಧರ ಅವರು ಸ್ವಾಗತಿಸಿದರು.

ಈ ಕಾರ್ಯಕ್ರಮದಲ್ಲಿ ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರು, ಅಧ್ಯಾಪಕರು, ಆಡಳಿತ ಸಿಬ್ಬಂದಿ ಹಾಗೂ ಸಂಶೋಧಾನಾರ್ಥಿಗಳು ಉಪಸ್ಥಿತರಿದ್ದರು.

# ಯೋಗದಿಂದ ನೆಮ್ಮದಿ ಸಾಧ್ಯ: ಬಸವರಾಜ ಸ್ವಾಮಿಗಳು

**■ ಹಂಪಿ ಟೈಮ್ಸ್ ಹೊಸಪೇಟೆ**
ಯೋಗ ಮತ್ತು ಆಧ್ಯಾತ್ಮಕ್ಕೆ ಅವಿನಾಭಾವ ಸಂಬಂಧವಿದೆ. ಯೋಗ ಎಂದರೆ ಕೂಡುವುದು. ದೇಹ ಮತ್ತು ಮನಸ್ಸು ಆತ್ಮದಲ್ಲಿ ಸಂಗಮವಾಗಿದೆ. ನಮ್ಮ ಚಿತ್ತವೃತ್ತಿ ನಿವೃತ್ತಿಯ ಮೊದಲ ಮೆಟ್ಟಿಲು ಯೋಗವಾಗಿದ್ದು, ಇದರಿಂದ ನೆಮ್ಮದಿಯ ಜೀವನ ಸಾಧಿಸಬಹುದು ಎಂದು ಸುದ್ದಿಮೂಲ ಸಂಸ್ಥೆಯ ಸಂಪಾದಕರಾದ ಶ್ರೀ ಬಸವರಾಜ ಸ್ವಾಮಿಗಳು ಅಭಿಪ್ರಾಯಪಟ್ಟರು.



ಕನ್ನಡ ವಿಶ್ವವಿದ್ಯಾಲಯದ 21ನೇ ಜೂನ್ 2024ರಂದು ಅಕ್ಷರ ಗ್ರಂಥಾಲಯದ ಆವರಣದಲ್ಲಿ ಯೋಗ ಅಧ್ಯಯನ ವಿಭಾಗದಿಂದ ಅಂತರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ಯೋಗಾಭ್ಯಾಸ ಮತ್ತು ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಯೋಗವನ್ನು ಜಗತ್ತಿಗೆ ಪರಿಚಯಿಸುವ ಮೂಲಕ ಭಾರತ ಗುರು ಸ್ಥಾನದಲ್ಲಿದೆ. ದೇಹ ಮತ್ತು ಮನಸ್ಸು ಆತ್ಮ ಈ ಮೂರು ಒಂದಾಗುವುದು ಕಠಿಣ. ಈ ಮೂರನ್ನು ಸೇರಿಸುವ ತಂತ್ರವೇ ಯೋಗ. ಮನಸ್ಸು ದೇಹದ ಮೂಲಕ ತಪ್ಪು ಮಾಡಿದಾಗ ಆತ್ಮ ಮನಸ್ಸನ್ನು ಸರಿದಾರಿಗೆ ತರುವ ಕೆಲಸ ಮಾಡುತ್ತದೆ. ಮನಸ್ಸನ್ನು ಅರಿವಿನಲ್ಲಿ ಲೀನ ಮಾಡುವಲ್ಲಿ ಯೋಗದ ಪಾತ್ರ ಮಹತ್ತರವಾದುದು. ಬುದ್ಧನನ್ನು ಪಾಲಿಸಿ ನಾವು ಬೌದ್ಧರಾದೇವೆ ಹೊರತು ಸಂಬುದ್ಧರಾಗಲಿಲ್ಲ, ಮಹಾವೀರನನ್ನು ಪಾಲಿಸಿ ಜೈನರಾದವೇ ಹೊರತು ಜಿನರಾಗಲಿಲ್ಲ. ಇದರಿಂದ ಪ್ರತಿಯೊಬ್ಬರು ಅಂತಿಮ ಗುರಿ ತಲುಪಿ ಪರಮ ಸಂತೋಷಿಗಳಾಗಲು ಸಾಧ್ಯವಾಗುತ್ತಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ.ಡಿ.ವಿ. ಪರಮಶಿವಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡುತ್ತ ಯೋಗ ಎಂದರೆ ಕೇವಲ ವ್ಯಾಯಾಮವಲ್ಲ. ಅದು ಪರಿಪೂರ್ಣ ಜೀವನ ನಡೆಸಲು ಮೊದಲ ಮೆಟ್ಟಿಲು. ಲೌಕಿಕ ಬದುಕಿನ ಎಡರು–ತೊಡರುಗಳನ್ನು ನಿವಾರಿಸಿ ಒಳ್ಳೆಯ ಬದುಕನ್ನು ನಡೆಸಲು ಮಾನಸಿಕ ಆರೋಗ್ಯ ತುಂಬಾ ಮುಖ್ಯ. ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಯೋಗ ಸಹಕಾರಿಯಾಗಲಿದೆ ಎಂದು ಹೇಳಿದರು.

ಯೋಗ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ಮಾಧವ ಪೆರಾಜೆ ಅವರು ಗಣ್ಯರನ್ನು ಸ್ವಾಗತಿಸಿದರು. ಅಧ್ಯಾಪಕರಾದ ಸಿದ್ಧರಾಮಯ್ಯ ಅವರು ನಿರೂಪಿಸಿದರು. ಅಧ್ಯಯನಾಂಗದ ನಿರ್ದೇಶಕರಾದ ಡಾ.ಅಮರೇಶ ಯತಗಲ್ ಅವರು ವಿಶೇಷ ಉಪನ್ಯಾಸಕರ ಪರಿಚಯ ಮಾಡಿದರು. ಈ ಸಂದರ್ಭದಲ್ಲಿ ವಿವಿಧ ನಿಕಾಯಗಳ ಡೀನರು, ಪ್ರಾಧ್ಯಾಪಕರು, ಬೋಧಕ–ಬೋಧಕೇತರ ಸಿಬ್ಬಂದಿಗಳು, ಸಂಶೋಧನಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಪೋಸ್ಟ್ ಡಿಪ್ಲೋಮಾ ಕೋರ್ಸ್ ಪ್ರವೇಶಾತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**
ನಗರದ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಪ್ರಸಕ್ತ ಸಾಲಿನ ಪೋಸ್ಟ್ ಡಿಪ್ಲೋಮಾ ಇನ್ ಇಂಡಸ್ಟ್ರೀಯಲ್ ಸೇಪ್ಟಿ ಕೋರ್ಸ್ ಪ್ರವೇಶಾತಿಗೆ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಸರ್ಕಾರಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರು ತಿಳಿಸಿದ್ದಾರೆ.
ಆಸಕ್ತ ವಿದ್ಯಾರ್ಥಿಗಳು ಜುಲೈ 7 ಸಂಜೆ 5.30ರ ಒಳಗಾಗಿ ಅರ್ಜಿ ಸಲ್ಲಿಸಬಹುದು, ಜು.08 ರಂದು ಮೆರಿಟ್ ಪಟ್ಟಿ ಪ್ರಕಟಿಸಿದ ನಂತರ ಅಂದಿನಿಂದಲೆ ಪ್ರವೇಶ ಪ್ರವೇಶಾತಿ ಪ್ರಾರಂಭಗೊಳ್ಳುತ್ತದೆ.
ಪ್ರವೇಶ ಶುಲ್ಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ರ ಅಭ್ಯರ್ಥಿಗಳಿಗೆ 50 ರೂಪಾಯಿ, ಹಾಗೂ ಹಿಂದುಳಿದ ವರ್ಗದವರು ಮತ್ತು ಸಾಮಾನ್ಯ ವರ್ಗದವರಿಗೆ 100 ರೂಪಾಯಿ ನಿಗದಿಯಾಗಿದ್ದು, ಅರ್ಜಿಯನ್ನು ಪ್ರಾಂಶುಪಾಲರ ಕಚೇರಿಯಲ್ಲಿ ನೀಡಲಾಗುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಿಧನ ವಾರ್ತೆ

## ಎ.ಎಂ.ಅನ್ನದಾನ ಸ್ವಾಮಿ



**ಹೊಸಪೇಟೆ:** ಸ್ಥಳೀಯ ಬಿಡಿಸಿಸಿ ಬ್ಯಾಂಕ್ ಮೇನ್ ಬಜಾರ್ ಶಾಖೆಯ ನಿವೃತ್ತ ವ್ಯವಸ್ಥಾಪಕರಾದ ಎ.ಎಂ.ಅನ್ನದಾನ ಸ್ವಾಮಿ (89) ಇವರು ಶುಕ್ರವಾರ ಬೆಳಗಿನ ಜಾವ ವಯೋ ಸಹಜತೆ ಯಿಂದ ನಿಧನ ರಾದರು. ಮೃತರಿಗೆ ಮೂವರು, ಪುತ್ರರು, ಮೂವರು ಪುತ್ರಿ ಯರು, ಮೊಮ್ಮೊಕ್ಕಳು ಹಾಗೂ ಅಪಾರ ಬಂಧು ಗಳಿದ್ದಾರೆ. ಮೃತರ ಅಂತ್ಯಕ್ರಿಯೆ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಶುಕ್ರವಾರ ಸಂಜೆ ನೆರವೇರಿತು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
HAMPI TIMES VIJAYANAGARA
Join for vijayanagara dist. updates

# ವರುಷ ಪೂರೈಸಿದ ಪತ್ರಿಕೆಗೆ ಓದುಗರ ಒಡಲಾಳದ ಅಭಿಮತ

## ಪುಕ್ಕಟೆ ಓದುವವರೆ ಸಂಖ್ಯೆ ಹೆಚ್ಚು

ಹಂಪಿ ಟೈಮ್ಸ್ ಕನ್ನಡ ದಿನ ಪತ್ರಿಕೆ ಬಸಾಪುರ ಬಸವರಾಜ ಸಂಪಾದಕತ್ವದಲ್ಲಿ ಸಾಗಿದ ಒಂದು ವರ್ಷ ಒಂದು ಘಳಿಗೆ ಎನಿಸಿದೆ. ಅದ್ದೂರಿಯಾಗಿ ಬಿಡುಗಡೆಯಾದ ಪತ್ರಿಕೆ, ಹೊಸಬರಿಗೂ ಹಳಬರಿಗೂ ಬರೆಯಲು ಪ್ರೇರಣೆ ನೀಡಿ ಲೇಖಕರನ್ನು ಪ್ರೋತ್ಸಾಹಿಸಿದೆ. ತಮ್ಮ ಅನುಭವ ಸಾರವನ್ನು ಪತ್ರಿಕೆಯ ಮೂಲಕ ಸಾದರಪಡಿಸಿದ್ದೀರಿ. ಪತ್ರಿಕೆ ಕೊಂಡು ಓದುವವರಿಗಿಂತ ಪುಕ್ಕಟೆ ಓದುವವರೆ ಹೆಚ್ಚಿದ್ದ ಈ ಕಾಲಘಟ್ಟದಲ್ಲಿ ಪತ್ರಿಕೆ ನಡೆಸುವುದು ಕಷ್ಟದ ಕೆಲಸ ಆದರೂ ನಗುಮುಖದಿಂದಲೆ ಸವಾಲುಗಳನ್ನು ಎದುರಿಸುತ್ತ ಪತ್ರಿಕೆಯನ್ನು ಮುನ್ನೆಡೆಸುವ ನೀವು ಅಗ್ರಗಣ್ಯರು. ಪತ್ರಿಕೆ ನೂರು, ಸಾವಿರ ವರ್ಷ ಬಾಳಲಿ. ನಿಮ್ಮ ಸೇವೆ ಸಾರ್ಥಕ. ಅಭಿನಂದನೆಗಳು

– **ಚಂದ್ರಶೇಖರ ರೋಣದಮಠ,** ಹೊಸಪೇಟೆ

## ವೈಚಾರಿಕ ಪ್ರಜ್ಞೆ ಬಿತ್ತುವ ಪತ್ರಿಕೆ

ಕಲೆ ಸಾಹಿತ್ಯ ಸಂಸ್ಕೃತಿ ಮುಂತಾದ ಲಲಿತ ಕಲಾ ಪ್ರಕಾರಗಳನ್ನು ಪ್ರೋತ್ಸಾಹಿಸುತ್ತಾ, ಕೃಷಿ ವಿಜ್ಞಾನ ಶಿಕ್ಷಣ ಕ್ಷೇತ್ರಕ್ಕೆ ಇಂಬು ಕೊಡುತ್ತಾ ಕವಿ ಕಲಾವಿದ ಸಾಹಿತಿಗಳ ಬರವಣಿಗೆಗಳನ್ನು ಪ್ರಕಟಿಸಿ ಓದುಗರಲ್ಲಿ ವೈಚಾರಿಕ ಪ್ರಜ್ಞೆಯನ್ನು ಬಿತ್ತುತ್ತಾ ಬಂದಿರುವ ಈ ಪತ್ರಿಕೆ ರಾಜಕೀಯದ ಹೂರಣವನ್ನು ನಿರ್ಭಿಡೆಯಿಂದ ವಿಶ್ಲೇಷಿಸುವ ನನ್ನ ನೆಚ್ಚಿನ ಪತ್ರಿಕೆ ಎಂದರೆ ಅದು ಹಂಪಿ ಟೈಮ್ಸ್.

ಈ ಪತ್ರಿಕೆಗೆ ಈಗ ವರುಷದ ಸಂಭ್ರಮ. ವರುಷದ ಅವಧಿಯಲ್ಲಿಯೇ ಅಪಾರ ಜನಪ್ರಿಯತೆ ಗಳಿಸಿ ಲಕ್ಷಾಂತರ ಓದುಗರನ್ನು ತಲುಪುತ್ತಿರುವ ಈ ಪತ್ರಕೆ ಇನ್ನೂ ಉಜ್ವಲವಾಗಿ ಬೆಳೆಯಲಿ ಕನ್ನಡ ನಾಡಿನ ಹೆಮ್ಮೆಯ ಪತ್ರಿಕೆಯಾಗಿ ರೂಪಗೊಳ್ಳಲಿ ಎಂದು ಹಾರೈಸುವೆ, ಪತ್ರಿಕಾ ಬಳಗಕ್ಕೂ ಅಭಿನಂದನೆ

– **ಎ.ಎಂ.ಪಿ ವೀರೇಶಸ್ವಾಮಿ,** ಹೊಳಗುಂದಿ.

## ಅನೇಕ ಬರಹಗಾರರಿಗೆ ಅವಕಾಶ

ಪತ್ರಿಕೆಗೆ ಒಂದು ವರ್ಷವಾಗಿರುವ ಸುಸಂದರ್ಭದಲ್ಲಿ ಶ್ರೀ ಯುತರ ಜವಾಬ್ದಾರಿಯುತ ಮುಂದಾಳತ್ವಕ್ಕೆ, ಸದಾ ಸವಾಲುಗಳನ್ನು ಸ್ವೀಕರಿಸುವ ಸನ್ಮನಸ್ಸಿಗೆ, ಸಮಷ್ಟಿ ಹಿತದಲ್ಲಿ ನಂಬಿಕೆ ಇಟ್ಟಿರುವ ಮಾನವೀಯ ಮೌಲ್ಯದ ಮುಗ್ದ ಮನಸ್ಸಿನ ಮನುಷ್ಯನಿಗೆ, ಸಮಾಜದ ಅಳುಕುಗಳಿಗೆ ಸ್ಪಂದಿಸುವ ಮನೋಪ್ರವೃತ್ತಿಗೆ, ಹಿರಿಯರಲ್ಲಿ ತೋರಿಸುವ ವಿನಮ್ರತೆ, ಕಿರಿಯರಿಗೆ ಸದಾ ಮಾರ್ಗದರ್ಶಿಯಾಗಿರುವ ನಮ್ಮ ಪತ್ರಿಕೆಯ ಮುಂದಾಳುವಿಗೆ ಸದಾ ಕನಸು ಕಾಣುವ ಕನಸುಗಾರನಿಗೆ ನನ್ನಂತಹ ಅನೇಕ ಬರಹಗಾರರಿಗೆ ಅವಕಾಶವಿಟ್ಟು ಕೊಂಚವೂ ಅಹಮ್ಮಿಲ್ಲದೆ ಕೇವಲ ಪತ್ರಿಕೆಯ ಗೆಲುವಿನಲ್ಲಿ ಹೆಮ್ಮೆಯ ನಗೆ ಚಲ್ಲುವ ಸದಾ ಹಸನ್ಮುಖಿ ಶ್ರೀ ಯುತ. ಬಸವರಾಜ್ ಬಸಾಪುರ ಅವರಿಗೆ ಮತ್ತವರ ಕುಟುಂಬಕ್ಕೆ ದೇವರು ಆಯುಷ್ಯ ಆರೋಗ್ಯ ಧನ ಧಾನ್ಯಗಳನ್ನ ನೀಡಿ ಹರಸಲಿ. ಹಂಪಿ ಟೈಮ್ಸ್ ಪತ್ರಿಕೆಯ ಕೀರ್ತಿ ವಿಜಯನಗರ ಸಾಮ್ರಾಜ್ಯದ ಹಂಪಿಯಷ್ಟೇ ಪ್ರಸಿದ್ದಿ ಹೊಂದಲಿ ಎಂದು ಮನಪೂರ್ವಕವಾಗಿ ಹಾರೈಸುತ್ತೇನೆ.

**ಜಿ ಶಿವಕುಮಾರ್ ಸೋಗಿ.**

## ಹೆಸರು ಬದಲಾವಣೆ

ನಾನು ಹಾಲೇಶ ಹಡಪದ ತಂದೆ ಹಾಲಪ್ಪ ವಯಸ್ಸು 53ವರ್ಷ, ವಾಸ ನೇಕಾರಕಾಲೋನಿ ಹಳೇ ಹಗರಿಬೊಮ್ಮನಹಳ್ಳಿ, ಹಗರಿಬೊಮ್ಮನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆಯವನಾದ ನಾನು ಪ್ರಮಾಣಿಕರಿಸುವುದೇನೆಂದರೆ.
ನನ್ನ ಹೆಸರು ಮೂಲತಃ ಹಾಲೇಶ ಹಡಪದ ಎಂದು ಇದ್ದು, ನನ್ನ ಆಧಾರ್ ಕಾರ್ಡ್(ನಂ 2704 7603 4233)ನಂತೆ, ಇಂದಿನ ಚುನಾವಣೆ ಗುರುತಿನ ಚೀಟಿಯಲ್ಲೂ ಇದೇ ಹೆಸರು ದಾಖಲಾಗಿದೆ. ಆದರೆ, ನನ್ನ ಮೊದಲನೇ ಚುನಾವಣೆ ಗುರುತಿನ ಚೀಟಿಯಲ್ಲಿ ನನ್ನ ಹೆಸರು ಹಡಪದ ಹಾಲಪ್ಪ ತಂದೆ ಹಾಲಪ್ಪ ಎಂದು ದಾಖಲಾಗಿದ್ದು, ಬ್ಯಾಂಕ್/ಸರ್ಕಾರಿ/ಇತರೆ ಕಡೆ ಈ ಪ್ರಮಾಣಪತ್ರವನ್ನೇ ಸಲ್ಲಿಸಿದ್ದೇನೆ. ಆದ್ದರಿಂದ ಈ ಮೇಲಿನ ಎರಡೂ ಹೆಸರುಗಳು ನನ್ನವೇ ಎಂದು ಪ್ರಮಾಣಿಕರಿಸುತ್ತಾ, ಮುಂದಿನ ದಿನ ಹಾಲೇಶ ಹಡಪದ ತಂದೆ ಹಾಲಪ್ಪ ಎನ್ನುವ ಹೆರಿನಲ್ಲಿ ಎಲ್ಲಾ ವ್ಯವಹಾರಗಳನ್ನು ಮಾಡುತ್ತೇನೆ ಎಂದು ಪ್ರಮಾಣಪತ್ರದ ಮೂಲಕ ತಿಳಿಯಬಯಸುತ್ತೇನೆ.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA